# ತಪೋವಾಣಿ

ಸಂಪುಟ 15 ಸಂಚಿಕೆ 4 ಏಪ್ರಿಲ್ 2018 ರೂ.25

**ಜ್ಯೋತಿಕಾರ್ಯದ ವಾರ್ತಾಪತ್ರ**



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದರು.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.

## ಅನಿಸಿಕೆಗಳು

### ಗುರೂಜಿ ಕೃಷ್ಣಾನಂದ

**ಅನು: ಚಂಪ**

**(ಹಿಂದಿನ ವಾರ್ತಾಪತ್ರಗಳಿಂದ ಆಯ್ದ ಭಾಗಗಳು – ನವೆಂಬರ್ 1997ರ ಸಂಚಿಕೆ)**

ಆಗಲೇ ಡಿಸೆಂಬರ್ ಬಂದಾಯಿತು. ಈ ವರ್ಷ ಬಹು ಬೇಗ ಕಳೆದುಹೋದಂತೆನಿಸುತ್ತಿದೆ. ಹಾಗೂ ಮೋಂಬತ್ತಿ ಉರಿದಂತೆಲ್ಲ ಮುಗಿಯದ ಕೆಲಸಗಳು ಹೆಚ್ಚುತ್ತಲೇ ಇವೆ. 1997ರ ಬಗ್ಗೆ ಆರಾಮವಾಗಿ ಕುಳಿತು ಚಿಂತನೆ ನಡೆಸಲು ಸಮಯವೇ ಇಲ್ಲ. ನಾನು ಈ ವಿಷಯಗಳಲ್ಲಿ ಸಾಕಷ್ಟು ಸಮಯ ಕಳೆದಿದ್ದೇನೆ. ಈಗ ಕೆಲಸದತ್ತ ಗಂಭೀರವಾಗಿ ಗಮನ ಹರಿಸಬೇಕು.

ಚಳಿ ಇನ್ನೂ ಜಾಸ್ತಿಯಾಗಿಲ್ಲ. ಹೊಲಗಳಿನ್ನೂ ಹಸಿರಾಗಿಯೇ ಇವೆ. ಸುಗ್ಗಿಯ ಕಾಲವಿನ್ನು ದೂರವಿಲ್ಲ. ಚಂದ್ರನ ಬೆಳಕು ತಂಪಾಗಿದ್ದು ಅನೇಕ ಕನಸುಗಳ ಮತ್ತು ಯೋಜನೆಗಳ ಬಗ್ಗೆ ಅರಿವು ಮೂಡಿಸುತ್ತಿದೆ. ತಪೋನಗರದಲ್ಲಿ ಎಷ್ಟೊಂದು ಶಾಂತಿ ಮತ್ತು ಉತ್ಸಾಹವಿದೆ! ನಮ್ಮ ವಿದ್ಯಾರ್ಥಿಗಳಲ್ಲಿ ಬದಲಾವಣೆಗಳನ್ನು ಕಂಡು ಹೃದಯ ತುಂಬಿಬರುತ್ತಿದೆ. ಈಗೀಗ ಅವರು ಹೆಚ್ಚು ಮಾತನಾಡುತ್ತಿಲ್ಲ, ಹೆಚ್ಚು ಧ್ಯಾನ ಮಾಡುತ್ತಿದ್ದಾರೆ ಹಾಗೂ ವಿವೇಚನೆ ಮತ್ತು ಸಾಫಲ್ಯದ ನಗೆ ಬೀರುತ್ತಿದ್ದಾರೆ. ಅವರು ಬೆಳೆಯುತ್ತಿರುವುದನ್ನು ನೋಡುವುದು ಎಷ್ಟು ಆನಂದದಾಯಕ! ಆದರೆ ಒಂದಿಬ್ಬರು ತಮ್ಮ ಅಹಂ ನೊಡನೆ ಹೆಣಗಾಡುತ್ತಿರುವುದನ್ನು ಮತ್ತು ಬದಲಾಗದಿರಲು ಕಷ್ಟಪಡುತ್ತಿರುವುದನ್ನು ನೋಡಿದರೆ ನನಗೆ ದುಃಖವಾಗುತ್ತದೆ! “ಅವರಿಗಾಗಿ ಪ್ರಾರ್ಥನೆ ಮಾಡೋಣ” ಎಂಬ ನಮ್ಮ ಹೊಸ ಮಂತ್ರ ನನ್ನ ನೆರವಿಗೆ ಬರುತ್ತದೆ!

ಕೆಲಸ ಮತ್ತು ಜವಾಬ್ದಾರಿಯ ಬಗ್ಗೆ ನಾನು ಸುನೀಲ್‌ಗೆ ವಿವರಿಸುತ್ತಿದ್ದೆ. ತಾನು ಚೆಕ್‌ಅಪ್ ಮಾಡಿಸಿಕೊಳ್ಳಬೇಕು ಮತ್ತು ಮುಂದಿನ ಹಂತಕ್ಕೆ ದೀಕ್ಷೆ ತೆಗೆದುಕೊಳ್ಳಬೇಕು ಎಂಬುದು ಅವರ ಇಚ್ಛೆ ಎಂದು ನನಗೆ ತಿಳಿದಿತ್ತು, ಅದನ್ನು ನಾನು ಆ ದಿನವೇ ಪೂರೈಸುವೆನೆಂದು ಹೇಳಿದ್ದೆ. ಆ ದಿನ ಕಾರ್ತಿಕ ಹುಣ್ಣಿಮೆಯಾಗಿತ್ತು. ನಂತರ ಬೆಳಕಿನ ಒಂದು ಸ್ಫುರಣವಾಯಿತು; ಸೂಕ್ಷ್ಮ ಲೋಕದ ಬೆಳಕು–ದಿವ್ಯಜ್ಞಾನ. ಅವರಿಗೆ ಅದರ ಬಗ್ಗೆಯೂ ಹೇಳಿದೆ – ದೀಕ್ಷೆ ಅಂದರೆ ದೀಕ್ಷೆ ಪಡೆಯುವವರಿಗೆ ಚೈತನ್ಯಗಳನ್ನು ಕಳಿಸುವುದಷ್ಟೇ ಅಲ್ಲ, ಅದರಲ್ಲಿ ಅವರನ್ನು ಮೇಲಿನ ಹಂತಕ್ಕೆ ಸಿದ್ಧಗೊಳಿಸುವುದೂ ಸೇರಿರುತ್ತದೆ. ಅದನ್ನು ವಿವಿಧ ಹಂತಗಳಲ್ಲಿ ಮಾಡಲಾಗುತ್ತದೆ. ಮೊದಲು ಮನಸ್ಸಿನ ಮಟ್ಟದಲ್ಲಿ, ಅದಕ್ಕೆ ಬೇಕಾದ ಮನಃಸ್ಥಿತಿಯನ್ನು ಸೃಷ್ಟಿಮಾಡುವ ಮೂಲಕ, ನಂತರ ಬೌದ್ಧಿಕ ಮಟ್ಟದಲ್ಲಿ ಆತನಿಗೆ ಆ ಹಂತದ ಬಗ್ಗೆ ಅರಿವು ಮೂಡಿಸುವ ಮೂಲಕ, ಕೊನೆಯದಾಗಿ ಆತನನ್ನು ದೈವತ್ವದ ಮಟ್ಟದಲ್ಲಿ ಸಿದ್ಧಗೊಳಿಸುವ ಮೂಲಕ, ಈ ಕೊನೆಯ ಮಟ್ಟದಲ್ಲಿ ಹಲವಾರು ಆಂತರಿಕ ಪ್ರಕ್ರಿಯೆಗಳಿರುತ್ತವೆ. ಇದೇ ದೀಕ್ಷೆಯ ಅತ್ಯಂತ ಮುಖ್ಯ ಭಾಗ. ಅಂತಿಮ ಕಾರ್ಯವೆಂದರೆ ಸೂಕ್ತ ಚೈತನ್ಯಗಳನ್ನು ಸೂಕ್ತ ಪ್ರಮಾಣದಲ್ಲಿ ಕಳುಹಿಸುವುದು. ಈ ವಿವರಗಳಿಂದ ನಮಗೆ ಅರ್ಥವಾಗುವುದೇನೆಂದರೆ, ದೀಕ್ಷೆಯು ಸಾಧನೆಯ ಅತಿ ಮುಖ್ಯ ಭಾಗ.

ದೀಕ್ಷಾರ್ಥಿಗಳು ಹೂವು, ಹಣ್ಣು, ಗುರುದಕ್ಷಿಣೆ ಮುಂತಾದವುಗಳನ್ನೆಲ್ಲ ತರಬೇಕು ಎಂಬಂತಹ ಯಾವುದೇ ಬಾಹ್ಯಾಡಂಬರಗಳಿಲ್ಲದೆ ನಾವು ದೀಕ್ಷಾವಿಧಾನಗಳನ್ನು ಪೂರೈಸುತ್ತೇವೆ. ಆದರೆ ನಾವು ಅಂತಹ ಆಡಂಬರ ಮಾಡದಿರುವುದರಿಂದ ನಮ್ಮ ದೀಕ್ಷೆಯ ಮೌಲ್ಯವನ್ನು ಜನರು ಸಾಮಾನ್ಯವಾಗಿ ಅರ್ಥಮಾಡಿಕೊಳ್ಳುವುದಿಲ್ಲ. ಆದರೆ ಅದರ ಚಿಂತೆ ನನಗಿಲ್ಲ!

ನನಗೆ ಕೆಲವೊಮ್ಮೆ ತಮಾಷೆಯ ಸಂದರ್ಭಗಳು ಎದುರಾಗುತ್ತವೆ. ಕೆಲವೊಮ್ಮೆ ಜನರು ನನಗೆ ಪ್ರಶ್ನೆ ಕೇಳುತ್ತಾರೆ, ನನ್ನ ಉತ್ತರ ಪೂರ್ತಿಯಾಗುವ ಮೊದಲೇ ಅವರು ಮತ್ತೊಂದು ಪ್ರಶ್ನೆ ಕೇಳುತ್ತಾರೆ! ಪ್ರಶ್ನೆಗಳನ್ನು ಹಾಕುವುದೇ ಅವರ ಮುಖ್ಯ ಉದ್ದೇಶವೇನೋ ಎನಿಸುತ್ತದೆ. ಆದರೆ ಉತ್ತರಗಳು? ಅವರು ಕೇಳಿಸಿಕೊಳ್ಳಲಾರಂಭಿಸಿದಾಗ ಮಾತ್ರ ಅವರಿಗೆ ಉತ್ತರಗಳು ದೊರೆಯುತ್ತವೆ. ಆದರೆ ಕೇಳಿಸಿಕೊಳ್ಳುವುದು ಎಷ್ಟು ಕಷ್ಟದ ಕೆಲಸವೆಂದರೆ, ಕೆಲವರು ಮಾತ್ರ ಸರಿಯಾಗಿ ಕೇಳಿಸಿಕೊಳ್ಳುತ್ತಾರೆ.

ಒಬ್ಬ ಧ್ಯಾನಿಗೆ ಒಂದು ಅದ್ಭುತ ಅನುಭವವಾಗಿತ್ತು. ಅವರಿಗೆ ಮಿಂಚಿನ ಸ್ಫುರಣದ ಅನುಭವವಾಯಿತು. ಇದು ಬಹಳ ವಿರಳವಾದ ಅನುಭವ. ದಶವಿಧ ನಾದಗಳಲ್ಲಿ ಮಿಂಚು ಕೊನೆಯದು. ಮಿಂಚಿನ ಅನುಭವವಾದ ನಂತರ ಧ್ಯಾನಿಯು ಸಾಮಾನ್ಯವಾಗಿ ಸಮಾಧಿಸ್ಥಿತಿಗೆ ಹೋಗುತ್ತಾನೆ. ಈ ಧ್ಯಾನಿಗೆ ವಾಸ್ತವದಲ್ಲಿ ಭಗವಂತನ ದರ್ಶನವಾಗಿದೆ ಎಂದು ನನಗೆ ಅರ್ಥವಾಯಿತು! ಭಗವಂತ ಎಂದಿಗೂ ಯಾವುದೇ ರೂಪದಲ್ಲಿ ಕಾಣಿಸಿಕೊಳ್ಳುವುದಿಲ್ಲ. ಅವನು ಬೆಳಕಾಗಿ ಕಾಣಿಸಿಕೊಳ್ಳುತ್ತಾನೆ. ಈ ಅನುಭವವನ್ನು ಕೇಳಿದಾಗ, ಇದು ನನಗೇ ಆಯಿತೇನೋ ಎಂಬಷ್ಟು ಸಂತೋಷವಾಯಿತು. ಇದೇ ಅಧ್ಯಾತ್ಮ ವಲಯದ ಮಹತ್ವ. ಒಬ್ಬರಿಗಾದ ಅನುಭವ ಎಲ್ಲರಿಗೂ ಸಂತೋಷ ತರುತ್ತದೆ! ■

**ಮಾನಸ ಫೌಂಡೇಶನ್ (ರಿ)**
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560077. ಭಾರತ.
✆ 99000 75280 (ಬೆಳಗ್ಗೆ 10ರಿಂದ ಸಂಜೆ 5)
ಇ–ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ

ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ

ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ,
ಬನಶಂಕರಿ 2ನೇ ಹಂತ

### ಆನೇಕಲ್‌ನಲ್ಲಿ

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

**ಸಪ್ತರ್ಷಿ ಧ್ಯಾನ ಕೇಂದ್ರ, ರಾಜರಾಜೇಶ್ವರಿ ಬಡಾವಣೆ**

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ) ಪ್ರಕಾಶ್‌ಮಾರ್ಗ್ (ಮರಾಠಿ) ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/- ಡಿಡಿಯನ್ನು**
**'Manasa Light Age Foundation'**
**ಹೆಸರಿನಲ್ಲಿ ಕಳುಹಿಸಬೇಕು.**
**ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



ತಪೋನಗರದ ನಿವಾಸಿಗಳ ಕೂಟದಲ್ಲಿ ಮಹರ್ಷಿ ಅಮರರವರ ಜನ್ಮದಿನದ ವಾರ್ಷಿಕೋತ್ಸವ ಮತ್ತು ಮಹಾಶಿವರಾತ್ರಿಯನ್ನು ಆಚರಿಸಲಾಯಿತು

## ಸುದ್ಧಿ-ಸೂಚನೆ

- ದಿನಾಂಕ 02-05-2018, ಬುಧವಾರದಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ರವರೆಗೆ ತಪೋನಗರದಲ್ಲಿ ಓರಿಯಂಟೇಶನ್ ತರಗತಿಯನ್ನು ಆಯೋಜಿಸಲಾಗಿದೆ. ವೆಬ್‌ಕಾಸ್ಟ್ ವ್ಯವಸ್ಥೆಯನ್ನು ಹೊಂದಿರುವ ದೂರಕಲಿಕೆಯ ಸಾಧಕರು ಕೂಡಾ ನೇರಪ್ರಸಾರದ ಮೂಲಕ ಇದರಲ್ಲಿ ಭಾಗವಹಿಸಬಹುದು. ಆಸಕ್ತರು ದಿನಾಂಕ 30-04-2018ರ ಒಳಗೆ ಮಾನಸ ಆಫೀಸನ್ನು ಸಂಪರ್ಕಿಸಿ ತಮ್ಮ ಹೆಸರನ್ನು ರಿಜಿಸ್ಟರ್ ಮಾಡಬೇಕಾಗಿ ವಿನಂತಿ.
- ಶಂಬಲ ಮಾಸ್ಟರ್‌ಗಳಿಂದ ವಿಶೇಷ ದೀಕ್ಷೆ ಪಡೆಯಲು 11-03-2018 ರಂದು ಶಂಬಲ ಗ್ರೂಪ್‌ನ ಸದಸ್ಯರು ತಪೋನಗರದಲ್ಲಿ ಸೇರಿದ್ದರು, ಮತ್ತು ಅನೇಕರು ತಮ್ಮತಮ್ಮ ಸ್ಥಳಗಳಿಂದಲೇ ಅದರಲ್ಲಿ ಭಾಗಿಯಾದರು.
- ವಿಶೇಷ 'ರಾ' ಚೈತನ್ಯಗಳನ್ನು ಪಡೆಯಲು, 18-03-2018 ರಂದು 'ರಾ' ಸದಸ್ಯರು ಸೇರಿದ್ದರು.
- ನಮ್ಮ ಲೈಟ್ ಚಾನಲಿಂಗ್ ಕಾರ್ಯಕರ್ತರು, 5000ಕ್ಕೂ ಹೆಚ್ಚು ಶಾಲೆಗಳಲ್ಲಿ ಲೈಟ್ ಚಾನಲಿಂಗ್‌ಅನ್ನು ಕಲಿಸಿದ್ದಾರೆ. ಸುಮಾರು 28 ಲಕ್ಷ ಮಕ್ಕಳು ಬೆಳಕನ್ನು ಚಾನಲ್ ಮಾಡಲು ಕಲಿತಿದ್ದಾರೆ ಮತ್ತು ಸುಮಾರು 5 ಲಕ್ಷ ಮಕ್ಕಳು ಸರಿಸುಮಾರು 1200 ಶಾಲೆಗಳಲ್ಲಿ ನಿಯತವಾಗಿ ಲೈಟ್ ಚಾನಲ್ ಮಾಡುತ್ತಿದ್ದಾರೆ. ಲೈಟ್ ಚಾನಲಿಂಗ್‌ನ ಅರಿವನ್ನು ಹೆಚ್ಚಿಸಲು, ಇನ್ನಷ್ಟು ಕಾರ್ಯಕರ್ತರು ಬೇಕಾಗಿದ್ದಾರೆ. ಈ ಕೆಲಸಕ್ಕೆ ಸೇರಬಯಸುವವರು, ಇದಕ್ಕಾಗಿ ವಾರದಲ್ಲಿ ಸುಮಾರು ಅರ್ಧ ದಿನ ಕಾದಿರಿಸಲು ಸಾಧ್ಯವಿದ್ದರೆ ಮಾನಸ ಆಫೀಸನ್ನು ಸಂಪರ್ಕಿಸಬಹುದು.

## ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 08 | ಭಾನು | ಕೃಷ್ಣ ಅಷ್ಟಮಿ |
| 14 | ಶನಿ | ಸೌರಮಾನ ಯುಗಾದಿ<br>ಮಾಸ ಶಿವರಾತ್ರಿ |
| 16 | ಸೋಮ | ಅಮಾವಾಸ್ಯೆ |
| 18 | ಬುಧ | ಅಕ್ಷಯ ತೃತೀಯ |
| 23 | ಸೋಮ | ಶುಕ್ಲ ಅಷ್ಟಮಿ |
| 25 | ಬುಧ | ಶುಕ್ಲ ದಶಮಿ |
| 29 | ಭಾನು | ಬುದ್ಧ ಪೂರ್ಣಿಮಾ |

## ಆನೇಕಲ್‌ನಲ್ಲಿ ಕಾರ್ಯಕ್ರಮ

16-4-2018 ರಂದು ಸಂಜೆ 6 ಘಂಟೆಗೆ ಆನೇಕಲ್‌ನಲ್ಲಿರುವ ನಮ್ಮ ಸಪ್ತರ್ಷಿ ಧ್ಯಾನ ಕೇಂದ್ರದ 10ನೇ ವಾರ್ಷಿಕೋತ್ಸವವನ್ನು ಆಚರಿಸಲಾಗುವುದು.

## ಈ ತಿಂಗಳು ತಪೋನಗರದಲ್ಲಿ

| | |
|---|---|
| ಭಾನುವಾರಗಳು: | ಉಪನ್ಯಾಸಗಳು: ಬೆಳಿಗ್ಗೆ 11-12<br>ಲೈಟ್ ಚಾನಲಿಂಗ್:<br>ಮಧ್ಯಾಹ್ನ 12-1 |
| 08-4-2018 | ಮಧ್ಯಾಹ್ನ 2ಕ್ಕೆ ಲೈಟ್ ಚಾನಲ್ ಕಾರ್ಯಕರ್ತರ ಸಭೆ |
| 29-4-2018 | ಅಖಂಡ ಧ್ಯಾನ<br>(ಲೈಟ್ ಚಾನಲಿಂಗ್):<br>ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 |

ಗುರೂಜಿಯವರ ಬ್ಲಾಗ್ ಓದಲು ಮತ್ತು ಅವರ ವಿಡಿಯೋಗಳನ್ನು ನೋಡಲು www.speakingtree.in ವೆಬ್‌ಸೈಟ್‌ಗೆ ಭೇಟಿನೀಡಿ.

ಭಾನುವಾರದ ಉಪನ್ಯಾಸಗಳ ನೇರ ಪ್ರಸಾರವು ವೆಬ್‌ನಲ್ಲಿ ಮೆಂಬರ್‌ಗಳಿಗೆ ಲಭ್ಯವಿದೆ. ಇದರ ಮಾಹಿತಿಗಾಗಿ ಇ-ಮೇಲ್ ಮುಖಾಂತರ ಸಂಪರ್ಕಿಸಬಹುದು.

## ಲೈಟ್ ಚಾನಲಿಂಗ್ ಅನುಭವಗಳು

**ಸಂ: ವೈಶಾಲಿ ಜೋಶಿ; ಅನು: ಪಾಂಡುರಂಗ**

ರೈಲ್ವೆ ನಿಲ್ದಾಣದ ವಾಹನ ನಿಲುಗಡೆ ಸ್ಥಳದಲ್ಲಿ ಸ್ಕೂಟರ್‌ಅನ್ನು ನಿಲ್ಲಿಸಿದ್ದೆವು. ಒಂದು ಗಂಟೆಯ ನಂತರ ರೈಲ್ವೆ ನಿಲ್ದಾಣಕ್ಕೆ ಬಂದು ಸ್ಕೂಟರ್‌ಅನ್ನು ಸ್ಟಾರ್ಟ್ ಮಾಡಲು ಪ್ರಯತ್ನಿಸಿದಾಗ ಅದು ಸ್ಟಾರ್ಟ್ ಆಗಲಿಲ್ಲ. ಸ್ವಲ್ಪ ಸಮಯದ ನಂತರ ಸ್ಟಾರ್ಟ್ ಆಯಿತಾದರೂ, ಮತ್ತೆ ಅರ್ಧ ದಾರಿಯಲ್ಲಿ ಕೆಟ್ಟು ನಿಂತಿತು. ಸ್ಕೂಟರ್‌ನಲ್ಲಿ ಪೆಟ್ರೋಲ್ ಇತ್ತು, ಆದರೂ ಸ್ಟಾರ್ಟ್ ಆಗುತ್ತಿರಲಿಲ್ಲ. ನನ್ನ ಯಜಮಾನರು ಕಿಕ್–ಸ್ಟಾರ್ಟ್ ಮಾಡಿ ಮಾಡಿ ಸಾಕಾಗಿದ್ದರು. ಅಲ್ಲಿಯೇ ನಾನು ಲೈಟ್ ಚಾನಲಿಂಗ್ ಮಾಡಲು ಪ್ರಾರಂಭಿಸಿದೆ. ನಾನು ನನ್ನ ಯಜಮಾನರಿಗೆ ಮತ್ತೊಮ್ಮೆ ಪ್ರಯತ್ನಿಸಲು ಹೇಳಿದೆ. ಆಗ ಸ್ಕೂಟರ್ ಸರಿಯಾಗಿ ಸ್ಟಾರ್ಟ್ ಆಗಿ ನಾವು ಮನೆಯನ್ನು ತಲುಪಿದೆವು. ಇದು ಲೈಟ್ ಚಾನಲಿಂಗ್‌ನ ನನ್ನ ಮೊದಲ ಅನುಭವ.

– ಮುಗ್ಧಾ ಮಿಲಿಂದ್ ಕುಲಕರ್ಣಿ, ಲೈಟ್ ಚಾನಲ್ ವಾಲೆಂಟಿಯರ್

ಲೈಟ್ ಚಾನಲಿಂಗ್ ಸೆಷನ್ ಮುಗಿಸಿಕೊಂಡು ಮನೆಗೆ ಬಂದ ನಂತರ ಎಂದಿನಂತೆ ಮನೆಯ ಬಾಗಿಲು ತೆಗೆದು ಒಳಗೆ ಹೋದೆ, ಆದರೆ ಕೀಲಿ ಕೈಗಳನ್ನು ತೆಗೆದುಕೊಳ್ಳುವುದನ್ನು ಮರೆತು ಮುಖ್ಯ ದ್ವಾರದಲ್ಲೇ ಬಿಟ್ಟಿದ್ದೆ. ನಮ್ಮ ಮನೆಗೆ ಎರಡು ಬಾಗಿಲುಗಳಿವೆ – ಸೆಕ್ಯುರಿಟಿ ಬಾಗಿಲು ಮತ್ತು ಮುಖ್ಯ ದ್ವಾರ. ಮನೆಯಲ್ಲಿ ನಾನೊಬ್ಬಳೇ ಇದ್ದ ಕಾರಣ ಸೆಕ್ಯುರಿಟಿ ಬಾಗಿಲನ್ನು ಒಳಗಿನಿಂದ ಲಾಕ್ ಮಾಡಿದೆ. ಸಾಯಂಕಾಲ ಬಾಗಿಲು ತೆರೆಯಲು ಪ್ರಯತ್ನಿಸಿದಾಗ ನಾನು ಮಾಡಿದ್ದ ತಪ್ಪಿನ ಅರಿವಾಯಿತು. ಬಹಳ ಸಮಯ ಪ್ರಯತ್ನಿಸಿದರೂ ತೆರೆಯಲಾಗಲಿಲ್ಲ. ಸಹಾಯಕ್ಕಾಗಿ ಕರೆಯಲು ಯಾರೂ ಹತ್ತಿರದಲ್ಲಿ ಇರಲಿಲ್ಲ. ನನ್ನ ಯಜಮಾನರು ಕೂಡ ತಮ್ಮ ಆಫೀಸ್‌ನಲ್ಲಿ ಇದ್ದರು. ಹೊರಗಿನಿಂದಲೂ ಸಹ ಬೀಗ ತೆಗೆಯಲು ಸಾಧ್ಯವಿಲ್ಲವೆಂದು ನಂತರ ನನಗೆ ಅರಿವಾಯಿತು, ಏಕೆಂದರೆ ಸೆಕ್ಯುರಿಟಿ ಬಾಗಿಲನ್ನು ಒಳಗಿನಿಂದ ಲಾಕ್ ಮಾಡಿದ್ದೆ. ಆದ್ದರಿಂದ ಬೀಗ ಮುರಿಯಲೇಬೇಕಾಗಿತ್ತು. ನಾನು ಗೊಂದಲಕ್ಕೆ ಒಳಗಾದೆ. ಆಗ ನಾನು ಕಣ್ಣು ಮುಚ್ಚಿ, ಬಾಗಿಲನ್ನು ತೆರೆಯಲು ಸಹಾಯ ಮಾಡಿರೆಂದು ಋಷಿಗಳನ್ನು ಮತ್ತು ಬೆಳಕನ್ನು ಪ್ರಾರ್ಥಿಸಿದೆ. ನಂತರ ಬಾಗಿಲಿನ ಹಿಡಿಯನ್ನು ಮುಟ್ಟಿದಾಗ ಹೊರಗಿನಿಂದ ಯಾರೋ ಬಾಗಿಲನ್ನು ತೆರೆಯುತ್ತಿದ್ದಾರೇನೋ ಎನ್ನಿಸುವಂತೆ ಬಾಗಿಲು ನಿಧಾನವಾಗಿ ತೆರೆದುಕೊಂಡಿತು! ತಂಗಾಳಿ ಒಳಗೆ ಬಂತು. ಕೀಲಿ ಕೈ ಬಾಗಿಲಲ್ಲೇ ಇತ್ತು. ನನ್ನ ಕಣ್ಣುಗಳು ನೀರೂರಿದವು. ಹೃದಯ ತುಂಬಿ ಗೌರವದಿಂದ ಋಷಿಗಳಿಗೆ ಮತ್ತು ಬೆಳಕಿಗೆ ನನ್ನ ಕೃತಜ್ಞತೆಗಳನ್ನು ಹೇಳಿದೆ. ನಾನು ಭಾವಪರವಶಳಾಗಿ ಧ್ಯಾನಕ್ಕೆ ಕುಳಿತುಕೊಂಡೆ, ಅಗಾಧವಾದ ಬೆಳಕು ಮತ್ತು ಸಮಾಧಾನದ ಅನುಭವವಾಯಿತು. ಒಂದೂವರೆ ಗಂಟೆಗಳವರೆಗೆ ಪ್ರಯತ್ನಿಸಿದರೂ ತೆರೆಯಲಾಗದಿದ್ದ ಬಾಗಿಲು, ಬೆಳಕನ್ನು ಪ್ರಾರ್ಥಿಸಿದ ಕ್ಷಣದಲ್ಲಿಯೇ ತೆರೆದುಕೊಂಡಿತು! ಋಷಿಗಳ ಮತ್ತು ಬೆಳಕಿನ ಇರುವಿಕೆಯ ಅನುಭವ ಆಯಿತು, ನನ್ನಲ್ಲಿ ಕೃತಜ್ಞತೆ ತುಂಬಿತ್ತು.

– ವೈಶಾಲಿ ನಿತಿನ್ ತಾರೆ

## ತಪೋನಗರ ಡೈರಿ

**ಸೀಮಾ ಅಲ್‌ಮೇಲ್; ಅನು: ಪಾಂಡುರಂಗ**

ಫೆಬ್ರವರಿ ತಿಂಗಳ ತಪೋನಗರ ನಿವಾಸಿಗಳ ಕೂಟದಲ್ಲಿ ಅಮರಾಜಿಯವರ ಹುಟ್ಟು ಹಬ್ಬದ ವಾರ್ಷಿಕೋತ್ಸವ ಮತ್ತು ಶಿವರಾತ್ರಿಯ ವಿಶೇಷ ಸಂದರ್ಭದಲ್ಲಿ ಪ್ರಥಮ ಬಾರಿಗೆ ತಪೋನಗರದ ಮಹಿಳೆಯರು ಸೊಗಸಾದ ನೃತ್ಯ ರೂಪಕ ನಡೆಸಿಕೊಟ್ಟರು. ಮಿಸ್. ಶ್ರುತಿ ಸುಧಾಕರ್ ಅವರ ಪರಿಕಲ್ಪನೆಯಲ್ಲಿ ಅಭಿಲಾಷಿತ, ನಯನ ಮತ್ತು ಶ್ರೀಯುಕ್ತ ಸಹಯೋಗದಲ್ಲಿ ಮೂರು ಹಾಡುಗಳ ನೃತ್ಯ ರೂಪಕ ದೃಶ್ಯಗಳು ಮತ್ತಷ್ಟು ಮೆರುಗನ್ನು ಪಡೆದಿದ್ದವು. ಎಲ್ಲರೂ ಭರತ ನಾಟ್ಯದಲ್ಲಿ ಬೇರೆ ಬೇರೆ ಮಟ್ಟದಲ್ಲಿ ತರಬೇತಿ ಪಡೆದವರೇ. ಸಹ ನೃತ್ಯಗಾರ್ತಿಯರಿಗೆ ಕಷ್ಟವಾಗದಂತೆ ನಾಟ್ಯ ರಚನೆಯನ್ನು ಸರಳವಾಗಿರಿಸಿದ್ದರೂ ನೃತ್ಯದಲ್ಲಿ ಸಾಕಷ್ಟು ವೈವಿಧ್ಯತೆ ಮೂಡಿಸಿದ್ದರು. ಸ್ತ್ರೀ ದೇವತೆಗಳನ್ನು ಪ್ರತಿನಿಧಿಸುವವರು ಬಂಗಾಳಿ ಸೀರೆಯನ್ನುಟ್ಟು, ಕೈಗಳಲ್ಲಿ ದೀಪಗಳನ್ನು ಹಿಡಿದು, ದಿವ್ಯ ಪುರುಷರಂತೆ ವಿಶೇಷ ವೇಷ ಭೂಷಣ ಧರಿಸಿದವರ ನೃತ್ಯ ಲಯಕ್ಕೆ ತಕ್ಕಂತೆ ನರ್ತಿಸಿದರು. ಚಿಣ್ಣರು ಶಿವ–ಪಾರ್ವತಿ ಮತ್ತು ಅಮರಾಜಿ ಅವರಂತೆ ಉಡುಪು ಧರಿಸಿದ್ದು ಮನಮುಟ್ಟುವಂತಿತ್ತು. ನೃತ್ಯ ಕಾರ್ಯಕ್ರಮಕ್ಕೆ ಅನೇಕ ದಿನಗಳ ಹಿಂದೆಯೇ ರಿಹರ್ಸಲ್ ಜೊತೆಗೇ ವಿನೋದಾವಳಿಗಳೂ ಪ್ರಾರಂಭವಾಗಿದ್ದವು. ಎಂದಿನಂತೆ ಈ ಕಾರ್ಯಕ್ರಮಕ್ಕಾಗಿ ದೊಡ್ಡದಾದ ಸಭಾಂಗಣವನ್ನು ಸುಂದರವಾಗಿ ಸಿಂಗರಿಸಿದ್ದರು. ಕಾರ್ಯಕ್ರಮದಲ್ಲಿ ಪಾಲ್ಗೊಂಡವರಿಗೆ ಇದು ಕಣ್ಣಿಗೆ ಹಬ್ಬದಂತಿತ್ತು. ಇದು ಕೇವಲ ನೆರೆದಿದ್ದವರಿಗೆ ಮಾತ್ರವಲ್ಲದೆ ದೇವ ಲೋಕದ ಸೂಕ್ಷ್ಮ ವ್ಯಕ್ತಿಗಳು ಸಹ ನಮ್ಮವರ ಆಕರ್ಷಕ ನೃತ್ಯವನ್ನು ಆಶೀರ್ವದಿಸಿ ಸ್ವರ್ಗದ ಅಪ್ಸರೆಯರ ನೃತ್ಯಕ್ಕೆ ಹೋಲಿಸಿರಬಹುದು.

ಶ್ರೀ ಗಿರೀಶ್ ಮತ್ತು ಶ್ರೀಮತಿ ರಶ್ಮಿ ಅವರು ಬೆಳಗಾವಿ ಜಿಲ್ಲೆಯ ಅಮರ ಅವರ ಸ್ವಂತ ಊರಿನಲ್ಲಿ ತೆಗೆದ ಅಪರೂಪದ ಫೋಟೋಗಳನ್ನು ಪ್ರದರ್ಶಿಸಲಾಯಿತು. ಅವರು ಪ್ರವಾಸ ನಿಮಿತ್ತ ಬೆಳಗಾವಿ ಮತ್ತು ಸುತ್ತ ಮುತ್ತ ಪ್ರದೇಶಗಳಿಗೆ ಹೋಗಿದ್ದರು, ಮತ್ತು ಅಲ್ಲಿನ ಹಳೇ ತಲೆಮಾರಿನ ಜನರೊಂದಿಗೆ ಮಾತನಾಡಿ ವಿವರಗಳನ್ನು ಸಂಗ್ರಹಿಸಿ ಫೋಟೋಗಳನ್ನು ತೆಗೆದುಕೊಂಡು ಬಂದಿದ್ದರು. ಇಂಥ ಪ್ರತಿಯೊಂದು ಘಟನೆಗಳಲ್ಲಿ ತಪೋನಗರ ನಿವಾಸಿಗಳು ಗುರೂಜಿ ಮತ್ತು ಲೈಟ್ ಮಾಸ್ಟರುಗಳಿಗೆ ತಮ್ಮ ಪ್ರೀತಿಯನ್ನು ವ್ಯಕ್ತಪಡಿಸುತ್ತಾರೆ. ■

## ಲೈಟ್ ಚಾನಲ್ಸ್

**ವಿಶ್ವ ಸಂಚಲನ**

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.comಗೆ ಬನ್ನಿ.

## ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡುವುದು.

# ಗುರೂಜಿಯವರ ನುಡಿಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

ಸೆಪ್ಟೆಂಬರ್ 2005

ಋಷಿಗಳಿಂದ ಸಹಾಯವನ್ನು ಕೇಳಿ ಪಡೆದ ನಂತರ ಅಥವ ಋಷಿಗಳಿಂದ ಹೀಲಿಂಗ್ ಚಿಕಿತ್ಸೆ ಪಡೆದ ನಂತರ, ಯಾರಾದರೊಬ್ಬರು ಬೇರೊಂದು ವಿಧಾನವನ್ನು ಪರೀಕ್ಷಿಸಲು ಪ್ರಯತ್ನಿಸಿದರೆ, ಸಹಾಯಕ್ಕಾಗಿ ಅಥವ ಹೀಲಿಂಗ್‌ಗಾಗಿ ಬೇರೆ ಒಬ್ಬ ವ್ಯಕ್ತಿಯ ಬಳಿಗೆ ಹೋಗಲು ಬಯಸಿದರೆ, ಅದು ಸರಿಯೋ ಅಥವ ತಪ್ಪೋ? "ಅದರಲ್ಲಿ ತಪ್ಪೇನಿದೆ?" ಎಂದು ಕೇಳಬಯಸುತ್ತೇನೆ. ನಿಮಗೆ ಸ್ವಾತಂತ್ರ್ಯವಿದೆ, ನೀವು ಎಲ್ಲಿಂದ ಬೇಕಾದರೂ ಸಹಾಯ ಪಡೆಯಬಹುದು. ಎಲ್ಲವೂ ದೇವರಿಂದಲೇ ಬರುತ್ತದೆ. ಯಾವೊಬ್ಬ ವ್ಯಕ್ತಿಯಾಗಲೀ ಅಥವ ಯಾವೊಂದು ಗುಂಪು ಆಗಲೀ ಇದರ ಸಂಪೂರ್ಣ ಹಕ್ಕುಸ್ವಾಮ್ಯ ಪಡೆದಿಲ್ಲ. ಪರಿಹಾರ ಸಿಗುವುದು ಅತಿ ಮುಖ್ಯವಾದ ವಿಷಯ. ಇದು ಸತ್ಯದ ಒಂದು ಭಾಗ. ನಾವು ಅರ್ಥಮಾಡಿಕೊಳ್ಳಬೇಕಾಗಿರುವ ಇತರೆ ಸಹಜ ಪರಿಣಾಮಗಳಿವೆ. ನೀವು ಬೇರೆ ಮೂಲಗಳಿಂದ ಸಹಾಯ ಅಥವ ಹೀಲಿಂಗ್‌ಅನ್ನು ಪಡೆಯಲು ಪ್ರಾರಂಭಿಸಿದಾಗ, ನಾವು ನಮ್ಮ ಸಹಾಯ ಅಥವ ಹೀಲಿಂಗ್ ಅನ್ನು ನಿಲ್ಲಿಸುತ್ತೇವೆ. ಕಾರಣವೇನೆಂದರೆ ನಮ್ಮ ವಿಧಾನಗಳು ಬೇರೆ ಆಗಿರುತ್ತವೆ ಹಾಗೂ ಮತ್ತೊಂದು ಮೂಲದ ವಿಧಾನಗಳು ಬೇರೆ ಆಗಿರುತ್ತವೆ. ಈ ಎರಡು ವಿಧಾನಗಳು ಅಷ್ಟೊಂದು ಚೆನ್ನಾಗಿ ಹೊಂದುವುದಿಲ್ಲ. ಗೊಂದಲಗಳು ಉಂಟಾಗುತ್ತವೆ, ಅದು ಸರಿಯಲ್ಲ. ಹಾನಿಯೇನೂ ಉಂಟಾಗುವುದಿಲ್ಲ. ಮತ್ತೊಂದು ಅತಿ ಸೂಕ್ಷ್ಮ ದೃಷ್ಟಿಕೋನವಿದೆ – ಇಲ್ಲಿಂದ ಸಂಪೂರ್ಣವಾಗಿ ಅಥವ ಸಾಕಷ್ಟು ಸಹಾಯವನ್ನು ಪಡೆಯುವುದಕ್ಕೆ ಮುಂಚೆಯೇ ಜನರು ಮತ್ತೊಬ್ಬರಿಂದ ಸಹಾಯ ಪಡೆಯಲು ಪ್ರಯತ್ನಿಸುತ್ತಾರೆ, ಅಥವ ಅವರಿಗೆ ಈ ಮಾರ್ಗದಲ್ಲಿ ನಂಬಿಕೆ ಇರುವುದಿಲ್ಲ. ಇದು ಕೂಡ ಒಂದು ವಾಸ್ತವ.

ಒಬ್ಬ ವ್ಯಕ್ತಿ ಸಹಾಯ ಅಥವ ಹೀಲಿಂಗ್ ಅನ್ನು ಪಡೆಯುವುದನ್ನು ಮುಂದುವರಿಸಲು ನಮ್ಮಲ್ಲಿಗೆ ಹಿಂದಿರುಗಿ ಬಂದರೆ ನಾವೇನು ಮಾಡಬೇಕು? ನಮ್ಮ ಸಹಾಯ ಮುಂದುವರೆಯುತ್ತದೆ, ಅದರಲ್ಲಿ ಅನುಮಾನವಿಲ್ಲ. ಈ ಎಲ್ಲ ಸಣ್ಣ ವಿಷಯಗಳನ್ನು ಮರೆತು ಅವಶ್ಯಕವಾದ ವಿಷಯವನ್ನು ನೆನಪಿಡಿ – ಎಲ್ಲಿಂದಲೇ ಆದರೂ ನಾವು ಸಹಾಯವನ್ನು ಪಡೆದಾಗಲೆಲ್ಲಾ ಅದನ್ನು ನಾವು ದೇವರಿಂದಲೇ ಪಡೆಯುತ್ತೇವೆ, ಎಲ್ಲ ಚೈತನ್ಯಗಳೂ ದೇವರಿಂದಲೇ ಬರುತ್ತವೆ. ನಮಗೆ ದೇವರಲ್ಲಿ ನಂಬಿಕೆ ಇದ್ದರೆ ಸಾಕು. ವ್ಯಕ್ತಿಗಳ ಮೇಲಿನ ನಂಬಿಕೆಯಲ್ಲಿ ವ್ಯತ್ಯಾಸವಾಗಬಹುದು, ಆದರೆ ಅದೇನೂ ಮುಖ್ಯವಲ್ಲ.

ಇನ್ನು ಮುಂದೆ, ನಾವಾಗಲೇ ಪಡೆದಿರುವ ಜ್ಞಾನವನ್ನು ಆಚರಣೆಗೆ ತರಬೇಕಾದಂತಹ, ಸಾಧನೆಯ ಅತ್ಯಂತ ಪ್ರಮುಖ ಭಾಗದ ಮೇಲೆ ನಮ್ಮ ಗಮನವನ್ನು ಹೆಚ್ಚು ಕೇಂದ್ರೀಕರಿಸೋಣ. ಜ್ಞಾನವನ್ನು ಬಳಸಿಕೊಳ್ಳದಿದ್ದರೆ ಅದು ವ್ಯರ್ಥವಾಗುತ್ತದೆ. ನಾವು ಇಲ್ಲಿ ಪಡೆದ ಜ್ಞಾನ ಮತ್ತು ವಿವೇಕವನ್ನು ಅಳವಡಿಸಿಕೊಂಡರೆ, ನಮ್ಮ ಜೀವನದ ಗುಣಮಟ್ಟ ಉತ್ತಮಗೊಳ್ಳುತ್ತದೆ. ನಾವು ದೇವರೆಡೆಗೆ ಸಾಗಲು ಪ್ರಾರಂಭಿಸುತ್ತೇವೆ.

ನಾವು ಇಲ್ಲಿ ಪಡೆದ ಚೈತನ್ಯಗಳನ್ನು ಅಥವ ತಂತ್ರಗಳನ್ನು ಬಳಸಿಕೊಳ್ಳಲು ಪ್ರಾರಂಭಿಸಿದರೆ, ಇವು ನಮ್ಮ ಕರ್ಮಗಳನ್ನು ಸುಟ್ಟು ಹಾಕಲು, ನಮ್ಮನ್ನು ಶುದ್ಧಗೊಳಿಸಲು ಮತ್ತು ದೇವರ ಅನುಗ್ರಹಕ್ಕೆ ಅರ್ಹರನ್ನಾಗಿಸಲು ಸಹಾಯ ಮಾಡುತ್ತವೆ. ಆದ್ದರಿಂದ ಯಮ–ನಿಯಮಗಳನ್ನು ಅಥವ ಶಂಬಲ ನಿಯಮಗಳನ್ನು ಅಭ್ಯಾಸ ಮಾಡಿದರೆ, ನಾವು ಧ್ಯಾನವನ್ನು ಮಾಡಬೇಕಾಗಿಲ್ಲ.

ಜನರೊಂದಿಗೆ ಮಾತನಾಡುವುದನ್ನು ಹಲವು ಬಾರಿ ತಪ್ಪಿಸಿಕೊಳ್ಳುತ್ತೇನೆ. ಕೆಲವೊಮ್ಮೆ ನಾನು ಮಾತನಾಡಲೇಬೇಕಾಗುತ್ತದೆ, ಒಳ್ಳೆಯ ಸಂಭಾಷಣೆ ಅಥವ ಒಂದು ರೀತಿಯ ಚರ್ಚೆ ನನಗೆ ಸಂತೋಷ ತರುತ್ತದೆ. ವಿಚಾರ ವಿನಿಮಯದಲ್ಲಿ ತೊಡಗಿದ್ದಾಗ ಕೆಲವೊಮ್ಮೆ ಉನ್ನತ ಮಟ್ಟವನ್ನು ತಲುಪುತ್ತೇವೆ, ಅಂತಹ ಸಮಯದಲ್ಲಿ ಖಂಡಿತವಾಗಿಯೂ ನನಗೆ ಸಂತೋಷವಾಗುತ್ತದೆ. ಅಂಥ ಒಂದು ಸಮಯದಲ್ಲಿ ಒಂದು ವಿಷಯದ ಪ್ರಸ್ತಾಪವಾಯಿತು – ಕಲಿಯುವುದಕ್ಕಾಗಿ ನಾವು ಒಂದು ಮಾರ್ಗಕ್ಕೆ ಅಥವ ಒಬ್ಬ ವ್ಯಕ್ತಿಯ ಬಳಿಗೆ ಹೋದಾಗ ನಾವು ವಿದ್ಯಾರ್ಥಿಗಳು ಎಂಬುದನ್ನು ಮರೆಯಬಾರದು. ವಿದ್ಯಾರ್ಥಿಯು ಭಾವೀ ಶಿಕ್ಷಕನಾಗಿರಬಹುದು, ಮಹಾನ್ ಮಾಸ್ಟರ್ ಆಗಿರಬಹುದು, ಆದರೆ ಆ ಸಮಯದಲ್ಲಿ ಅವನು ಕಲಿಯುತ್ತಿದ್ದಾನೆ, ಅವನೊಬ್ಬ ವಿದ್ಯಾರ್ಥಿ, ಅವನು ಕಲಿಯಬೇಕು ಆದರೆ ಕಲಿಸಲು ಪ್ರಯತ್ನಿಸಬಾರದು. ಕಲಿಸಲು ಪ್ರಯತ್ನಿಸಿದರೆ ಗೊಂದಲವುಂಟಾಗುತ್ತದೆ. ಯಾವುದೇ ಒಂದು ಸಮಯದಲ್ಲಿ ಒಂದು ಪಾತ್ರ ಮಾತ್ರವೇ ಸಾಧ್ಯ. ಒಬ್ಬನು ಮಾತ್ರವೇ ವಾಹನವನ್ನು ಚಲಾಯಿಸಬಲ್ಲ ಇನ್ನೊಬ್ಬನು ಹಿಂದುಗಡೆ ಕುಳಿತುಕೊಳ್ಳಬೇಕು, ಎಂದು ನಾನು ಯಾವಾಗಲೂ ಹೇಳುತ್ತೇನೆ.

ನಾವೆಲ್ಲರೂ ದೇವರಿಂದ ಮತ್ತು ಋಷಿಗಳಿಂದ ಸಂದೇಶಗಳನ್ನು ಪಡೆಯುತ್ತೇವೆ. ಆದರೆ ಅದೇಕೋ ನಾವು ಈ ಅಭ್ಯಾಸವನ್ನು ಕಳೆದುಕೊಂಡಿದ್ದೇವೆ, ಏಕೆಂದರೆ ನಾವು ಎಲ್ಲ ಸಮಯದಲ್ಲೂ ಮಾತನಾಡುತ್ತಲೇ ಇರುತ್ತೇವೆ! ಕೆಲವು ಕ್ಷಣ ಮೌನವಾಗಿ ಕುಳಿತುಕೊಂಡು ಸ್ವಲ್ಪ ಗಮನಕೊಟ್ಟರೆ ದೇವರ ಮತ್ತು ಋಷಿಗಳ ಮಾತುಗಳನ್ನು ಕೇಳಿಸಿಕೊಳ್ಳಬಹುದು. ನನ್ನಲ್ಲಿ ಅಥವ ಯಾರೊಬ್ಬರಲ್ಲೂ ವಿಶೇಷತೆಯೇನು ಇಲ್ಲ; ಇಲ್ಲಿ ಎಲ್ಲರೂ ವಿಶೇಷ ವ್ಯಕ್ತಿಗಳು. ನಾವು ವಿಶೇಷ ವ್ಯಕ್ತಿಗಳಾಗಿರದಿದ್ದರೆ, ಇಲ್ಲಿ ಕುಳಿತುಕೊಂಡಿರುತ್ತಿರಲಿಲ್ಲ.

ಆಲೋಚನೆಗಳು ಮತ್ತು ಭಾವನೆಗಳ ಬಗ್ಗೆ ನಾವು ಅಗಿಂದ್ದಾಗ್ಗೆ ಮಾತನಾಡುತ್ತಿರುತ್ತೇವೆ. ಅವೆರಡು ಬೇರೆ ಬೇರೆ ಎಂದು ನಮಗೆ ತಿಳಿದಿದೆ. ಆಲೋಚನೆಗಳು ಬುದ್ಧಿಯಲ್ಲಿ ಮತ್ತು ಭಾವನೆಗಳು ಮನಸ್ಸಿನಲ್ಲಿ ಹುಟ್ಟುತ್ತವೆ. ಇವೆರಡು ಬೇರೆ ಎಂದು ತಿಳಿದಿದ್ದರೂ, ಸಾಮಾನ್ಯವಾಗಿ ನಾವು ಗಮನಿಸಿದರೆ ಇವೆರಡನ್ನು ಪ್ರತ್ಯೇಕಿಸುವುದು ಬಹಳ ಕಷ್ಟ. ಇವೆರಡನ್ನು ಪ್ರತ್ಯೇಕಿಸಲು ರೂಪಿಸಿರುವ ತಂತ್ರವೇ ಧ್ಯಾನ. ನೀವು ಇಲ್ಲಿ ಪ್ರಾಥಮಿಕ ತರಗತಿಗೆ ಸೇರಿದಾಗ, ಮನಸ್ಸು ಮತ್ತು ಬುದ್ಧಿಗಳೆರಡೂ ಬೇರೆ ಬೇರೆ ಚಟುವಟಿಕೆಗಳಲ್ಲಿ ತೊಡಗಿರಲಿ ಎನ್ನುವ ಕಾರಣದಿಂದಾಗಿ, ಮನಸ್ಸಿಗೆ ಮಂತ್ರವನ್ನೂ ಮತ್ತು ಬುದ್ಧಿಗೆ ಧಾರಣವನ್ನೂ ಕೊಡುತ್ತೇವೆ. ಅವುಗಳನ್ನು ಮೌನಗೊಳಿಸಲು ಈ ಪ್ರತ್ಯೇಕಿಸುವಿಕೆ ಬೇಕು. ಒಟ್ಟಿಗಿದ್ದಾಗ ಅವುಗಳ ಬಲ ಹೆಚ್ಚು. ಬೇರೆ ಬೇರೆಯಾಗಿದ್ದಾಗ ಅವು ಬಲಹೀನವಾಗಿರುತ್ತವೆ. ಅವು ಒಟ್ಟಿಗಿದ್ದಾಗ ನಮ್ಮನ್ನು ನಿಯಂತ್ರಿಸುತ್ತವೆ ಮತ್ತು ಬೇರೆ ಬೇರೆಯಾಗಿದ್ದಾಗ ನಾವು ಅವನ್ನು ನಿಯಂತ್ರಿಸಬಹುದು. ಆಲೋಚನೆಗಳು ಮತ್ತು ಭಾವನೆಗಳನ್ನು ಪ್ರತ್ಯೇಕಗೊಳಿಸುವಿಕೆಯು ಧ್ಯಾನದಲ್ಲಿ ಸಂಭವಿಸುತ್ತದೆ, ಅವು ಹಸ್ತಕ್ಷೇಪ ಮಾಡುವುದಿಲ್ಲ, ಅವು ಬಲಹೀನವಾಗಿ ಮೌನಗೊಳ್ಳುತ್ತವೆ. ಈ ರೀತಿಯಾದಾಗ ನಮ್ಮ ಅರಿವನ್ನು ಬಿಡುಗಡೆಗೊಳಿಸಬಹುದು. ಬಿಡುಗಡೆಗೊಂಡ ಅರಿವು ಉನ್ನತ ಮಟ್ಟಗಳಿಗೆ ಏರುತ್ತದೆ.

ಧ್ಯಾನದ ಪ್ರಭಾವ 24 ಗಂಟೆಗಳವರೆಗೆ ಇರುತ್ತದೆ. ಈ ಪ್ರಭಾವದಿಂದಾಗಿ, ಧ್ಯಾನ ಮಾಡದಿದ್ದ ಸಮಯಗಳಲ್ಲಿ ಕೂಡ ಆಲೋಚನೆಗಳು ಮತ್ತು ಭಾವನೆಗಳನ್ನು ನಾವು ಪ್ರತ್ಯೇಕಿಸಬಹುದು. ಅದು, ಶುದ್ಧತೆ, ಶಾಂತಿ ಮತ್ತು ಪ್ರೀತಿಯ ಉನ್ನತ ಮಟ್ಟಗಳಿಗೆ ನಮ್ಮ ಅರಿವನ್ನು ಏರಿಸಿಕೊಳ್ಳಲು ಸಹಾಯ ಮಾಡುತ್ತದೆ. ಇದು ಬಹಳ ಮುಖ್ಯ. ಏಕೆಂದರೆ ನಮ್ಮ ಅರಿವು ಪ್ರಜ್ಞೆಯ ಉನ್ನತ ಪದರಗಳಿಗೆ ಏರಿದಾಗ, ಅದು ಶಾಂತಿ, ಶುದ್ಧತೆ, ಮತ್ತು ಪ್ರೀತಿಯ ಅನುಭವವನ್ನು ಪಡೆಯುತ್ತದೆ. ಮತ್ತು ಅನುಭವ ಪಡೆದ ನಂತರ ಅದು ಈ ಅನುಭವಗಳನ್ನು ಆಲೋಚನೆಗಳಿಗೆ ಮತ್ತು ಭಾವನೆಗಳಿಗೆ ವರ್ಗಾಯಿಸಬಲ್ಲದು. ಆಗ ನಮ್ಮ ಆಲೋಚನೆಗಳು ಮತ್ತು ಭಾವನೆಗಳು ತೀರ ಸಾಮಾನ್ಯವಾಗಿ ಉಳಿಯದೆ ಶಾಂತಿ, ಶುದ್ಧತೆ, ಮತ್ತು ಪ್ರೀತಿಯಿಂದ ತುಂಬಿರುತ್ತವೆ. ಆಗ ನಮ್ಮ ಭಾವನೆಗಳು ಸಣ್ಣದಾಗಿರುವುದಿಲ್ಲ, ಅವು ಉದಾತ್ತವಾಗಿರುತ್ತವೆ. ಈ ಪ್ರಕ್ರಿಯೆ ತಾನಾಗಿಯೇ ಆಗುತ್ತದೆ, ನಮ್ಮೆಲ್ಲ ಆಲೋಚನೆಗಳು ಮತ್ತು ಭಾವನೆಗಳು ಸಕಾರಾತ್ಮಕಗೊಳ್ಳುತ್ತವೆ, ಆಧ್ಯಾತ್ಮಿಕಗೊಳ್ಳುತ್ತವೆ. ಸಕಾರಾತ್ಮಕತೆ ಮತ್ತು ಆಧ್ಯಾತ್ಮಿಕತೆ ಧ್ಯಾನದಿಂದ ಪ್ರಾರಂಭವಾಗುತ್ತದೆ. ಇದು ಧ್ಯಾನದ ನಂತರದ ಸಮಯದಲ್ಲಿ ಸಂಭವಿಸುತ್ತದೆ. ಆದ್ದರಿಂದ ಸಕಾರಾತ್ಮಕತೆ ತಾನಾಗಿಯೇ ಉಂಟಾಗುವುದಕ್ಕಾಗಿ ನಾವು ಧ್ಯಾನದ ಪ್ರಭಾವವನ್ನು ಉಳಿಸಿಕೊಳ್ಳಬೇಕು. ■

# ಶ್ರೀ ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

4–2–2018

ಮೂವತ್ತು ವರ್ಷಗಳ ಹಿಂದೆ, ಮಹರ್ಷಿ ಅಮರರವರ ಜನ್ಮದಿನದಂದು, ಗುರೂಜಿಯವರು ಮತ್ತು ಬೇರೆ ಏಳು ಜನರು ಅಂತರ್ ಮಾನಸದ ಗುಡಿಸಿಲಿನಲ್ಲಿ ಕುಳಿತು ಧ್ಯಾನ ಮಾಡುವ ಮೂಲಕ ಮಾನಸ ಫೌಂಡೇಷನ್ ಹುಟ್ಟಿತು.

ಇಂತಹ ಎಲ್ಲಾ ಸಂದರ್ಭಗಳಲ್ಲಿ, ಮಹರ್ಷಿ ಅಮರರವರು ಕೊಡುಗೆಗಳೊಂದಿಗೆ ಬರುತ್ತಾರೆಂದು ಗುರೂಜಿಯವರು ಹೇಳುತ್ತಿದ್ದರು. ಈ ಕೊಡುಗೆಗಳು ಎಲ್ಲರಿಗೂ ಅಪೂರ್ವವಾದವುಗಳಾಗಿರುತ್ತವೆ. ಅವರು ಅದ್ಭುತ ಚೈತನ್ಯಗಳನ್ನು ತರುತ್ತಾರೆ. ಈ ದಿನ ಧ್ಯಾನಮಾಡಿದಾಗ ನಾವು ಈ ಚೈತನ್ಯಗಳನ್ನು ಪಡೆಯುತ್ತೇವೆ. ಅದಕ್ಕೆ ಮುಂಚೆ ನಿಮ್ಮೊಂದಿಗೆ ಕೆಲವು ವಿಷಯಗಳನ್ನು ಹಂಚಿಕೊಳ್ಳುತ್ತೇನೆ.

ಮಹರ್ಷಿ ಅಮರರವರು ಹಲವಾರು ಸಾವಿರ ವರ್ಷಗಳಿಂದ ಋಷಿಗಳ ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ. ಅದು ಲಕ್ಷಾಂತರ ಅಥವ ಬಹುಶಃ ಕೋಟ್ಯಾಂತರ ವರ್ಷಗಳಿಂದ ಇರಬಹುದು, ನಮಗದು ತಿಳಿದಿಲ್ಲ. ಅವರು ಶಾಶ್ವತ, ಎಂದೆಂದಿಗೂ ಇರುವವರು. ನಮಗೆ ತಿಳಿದಿರುವ ಮಟ್ಟಿಗೆ, ಅವರು ಸುಮಾರಾಗಿ ಶತಮಾನಕ್ಕೆ ಒಮ್ಮೆ ಈ ಭೂಮಿಗೆ ಬರುತ್ತಾರೆ. ಹಾಗಿರುವಾಗ, ಅವರು ಎಷ್ಟು ಬಾರಿ ಹುಟ್ಟಿ ಬಂದಿರಬಹುದು! ಎಷ್ಟು ಲಕ್ಷ ಜನರಿಗೆ ಮಾರ್ಗದರ್ಶನ ನೀಡಿರಬಹುದು! ನಾವು ಊಹೆ ಮಾಡಬಹುದು ಅಷ್ಟೆ. ಮಹರ್ಷಿ ಅಮರರವರಾಗಿ ಬಂದ ಈ ಒಂದು ಜನ್ಮದಲ್ಲಿಯೇ ಅವರು 5000 ಕ್ಕೂ ಹೆಚ್ಚು ಜನರಿಗೆ ಮುಕ್ತಿಯ ಮಾರ್ಗ ತೋರಿಸಿದ್ದಾರೆ! ಅದು 1974ರ ಮೊದಲು. 1974ರ ನಂತರ ಬಂದವರು ಕೆಲಸಕ್ಕಾಗಿ ಬೇಕಾಗುತ್ತಾರೆ ಎಂದು ಗುರೂಜಿಯವರು ಹೇಳಿದ್ದರು.

ಅವರ ಎಲ್ಲ ಹುಟ್ಟುಗಳ ಬಗ್ಗೆ ನಮಗೆ ತಿಳಿದಿಲ್ಲ. ಮಹಾರಾಷ್ಟ್ರದ ಮಹಾನ್ ಸಂತ ಗೋರ ಕುಂಬಾರರಾಗಿ ಅವರು ಬಂದಿದ್ದರು ಎಂದು ನಮಗೆ ತಿಳಿದಿದೆ. ನಂತರ ಸಂತ ಏಕ್‌ನಾಥ್ ಮಹಾರಾಜ್ ಆಗಿ ಅವರು ಬಂದಿದ್ದರು. ಪ್ರತಿ ಬಾರಿಯೂ ಹೊಸ ಜ್ಞಾನವನ್ನು ತರುವ ಮೂಲಕ ಅಜ್ಞಾನದ ಅಂಧಕಾರವನ್ನು ತೊಡೆದುಹಾಕುವುದಕ್ಕೆ ಅವರು ಕಾರಣರಾಗಿದ್ದರು. ಅದು ಅವರ ವಿಶೇಷತೆ. ಪ್ರತಿ ಬಾರಿಯೂ ಅವರು ಹೊಸ ಜ್ಞಾನವನ್ನು ತರುತ್ತಿದ್ದರು, ಆಧ್ಯಾತ್ಮಿಕತೆಗೆ ಹೊಸ ದೃಷ್ಟಿಕೋನವನ್ನು ನೀಡುತ್ತಿದ್ದರು.

ಈ ಜನ್ಮದಲ್ಲಿ ಕೂಡ ಆಧ್ಯಾತ್ಮದ ಸಾಧನೆಯ ಬಗೆಗಿನ ಅನೇಕ ತಪ್ಪು ತಿಳುವಳಿಕೆಗಳನ್ನು ಅವರು ತೊಡೆದುಹಾಕಿದರು. ಅವರು ಮತ್ತೊಮ್ಮೆ ಹಿಂದಿರುಗಿ ಬಂದು, ಹೊಸಯುಗದೊಳಕ್ಕೆ ಹೋಗುವ ನಮ್ಮ ಪ್ರಯಾಣವನ್ನು ಮುಂದಿನ ಮಟ್ಟಕ್ಕೆ ಕೊಂಡೊಯ್ಯುತ್ತಾರೆ. ಅವರು ಹಿಂದಿರುಗಿ ಬರುವವರೆಗೂ, ಈ ವ್ಯವಸ್ಥೆಯನ್ನು ನಾವು ಜೀವಂತವಾಗಿಡಬೇಕು, ಇಲ್ಲಿನ ಜ್ಞಾನ ಜನರಿಗೆ ಲಭ್ಯವಿರುವಂತೆ ಮಾಡಬೇಕು, ಜನರು ಇಲ್ಲಿಗೆ ಬಂದು ಧ್ಯಾನಮಾಡಿ ಇಲ್ಲಿನ ಚೈತನ್ಯಗಳನ್ನು ಪಡೆದುಕೊಂಡು ಬೆಳೆಯಲು ಅನುಕೂಲವಾಗುವಂತೆ ಇಲ್ಲಿನ ಸೌಲಭ್ಯಗಳನ್ನು ಚೆನ್ನಾಗಿ ಕಾಪಾಡಬೇಕು.

ಈ ಭೂಮಿಯ ಮೇಲೆ ಅಜ್ಞಾನ ದಟ್ಟವಾಗಿದ್ದಾಗ ಹೊಸ ಜ್ಞಾನವನ್ನು ಕೆಳತರುವುದು ಮತ್ತಷ್ಟು ಕಷ್ಟವಾಗುತ್ತದೆ. ಮಾಸ್ಟರ್‌ಗಳಿಗೆ ಬಹಳಷ್ಟು ಗೊತ್ತಿದ್ದರೂ ಜನರು ಅದನ್ನು ಅರ್ಥ ಮಾಡಿಕೊಳ್ಳಲಾರರಾದ್ದರಿಂದ ಅವರು ಎಲ್ಲವನ್ನೂ ತಿಳಿಸುವುದಿಲ್ಲ. ಮಹರ್ಷಿ ಅಮರರವರ ಅತೀಂದ್ರಿಯ ಸಾಹಸಗಳ ಬಗ್ಗೆ ನಮಗೆ ತಿಳಿದಿರುವುದು ಕೂಡಾ ಸ್ವಲ್ಪವೇ, ಬಹುತೇಕ ಭಾಗ ನಮಗೆ ತಿಳಿದಿಲ್ಲ. ಪುರಾಣಗಳ ಮೂಲಕ ಮುಂದಿನ ದಿನಗಳಲ್ಲಿ ಅದು ತಿಳಿಯಬಹುದೇನೋ. ಈ ಹಿಂದೆ, ಈ ಭೂಮಿಯಲ್ಲಿ ದುಷ್ಟತೆ ಅತ್ಯಂತ ಹೆಚ್ಚಾಗಿದ್ದ ಕಾಲಗಳಲ್ಲಿ ಆಧ್ಯಾತ್ಮಿಕ ಸತ್ಯಗಳನ್ನು ಹೇಳಿದ ಮಹಾತ್ಮರುಗಳನ್ನು ಶಿಕ್ಷಿಸಲಾಗಿತ್ತು ಕೆಲವೊಮ್ಮೆ ಕೊಲ್ಲಲಾಗಿತ್ತು ಕೂಡ, ಏಕೆಂದರೆ ಜನರು ಹೊಸ ವಿಷಯಗಳನ್ನು ಒಪ್ಪಿಕೊಳ್ಳಲು ಸಿದ್ಧರಿರಲಿಲ್ಲ. ಆದರೆ ಅತ್ಯಂತ ದುಷ್ಟತೆಯ ಕಾಲದಲ್ಲಿ ಕೂಡ ಮಹರ್ಷಿ ಅಮರರವರಂತಹ ಮಾಸ್ಟರ್‌ಗಳು ಇಡೀ ಮನುಕುಲವನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ದಿದ್ದರು. ಅವರು ಹೊಂದಿರುವ ಬೆಳಕು ಅಷ್ಟೊಂದು ದೊಡ್ಡ ಪ್ರಮಾಣದ್ದಾಗಿದೆ!

ಅವರು ಕೆಳಬಂದ ಪ್ರತಿಬಾರಿಯೂ ಆಧ್ಯಾತ್ಮಿಕ ಕ್ರಾಂತಿಯನ್ನು ಪ್ರಾರಂಭಿಸಿದರು. ಸಂತ ಏಕನಾಥರು ಪ್ರಾರಂಭಿಸಿದ ಆಧ್ಯಾತ್ಮಿಕ ಕ್ರಾಂತಿಯು ಸತ್ಯಾರ್ಥಿಗಳಿಗೆ ಈಗಲೂ ಪ್ರೇರಣೆ ನೀಡುತ್ತದೆ. ಈ ಜನ್ಮದಲ್ಲಿ ಕೂಡ ಮಹರ್ಷಿ ಅಮರರವರು ಹೊಸಯುಗದ ಆಧ್ಯಾತ್ಮಿಕ ಸಂಚಲನವನ್ನು ಪ್ರಾರಂಭಿಸಿದರು. ಅವರಿಗಿಂತ ಮುಂಚಿತವಾಗಿ ಯಾರೊಬ್ಬರೂ ಹೊಸ ಯುಗದ ಬಗ್ಗೆ ಮಾತನಾಡಿಲ್ಲವೆಂದು ನಾನು ಭಾವಿಸುತ್ತೇನೆ. ಅವರು ಹೊಸ ಯುಗದ ಅಥವ ಸತ್ಯಯುಗದ ಸ್ಥಾಪಕರೆಂದು ನಾವು ಹೇಳಬಹುದು. ಹೊಸ ಯುಗಕ್ಕೆ ಸಂಬಂಧಿಸಿದ ಪ್ರಕ್ರಿಯೆಗಳನ್ನು ಪ್ರಾರಂಭಿಸುವ ಕಾರ್ಯಕ್ರಮದಲ್ಲಿ ಅವರು ಭಾಗವಹಿಸಿದ್ದರೆಂದರೆ ಅವರ ಪ್ರಾಮುಖ್ಯತೆಯನ್ನು ಊಹಿಸಿಕೊಳ್ಳಿ! ಅದಾದ ನಂತರ ಋಷಿಗಳು ಬಹಳಷ್ಟು ಕೆಲಸಗಳನ್ನು ಮಾಡಿದ್ದಿರಬಹುದು, ಈಗ ಹೊಸ ಅರಿವು ಉಂಟಾಗಿದೆ. ಹೊಸ ಜ್ಞಾನವನ್ನು ಜನರು ಒಪ್ಪಿಕೊಳ್ಳಬಲ್ಲವರಾಗಿದ್ದಾರೆ. ಹೆಚ್ಚು ಹೆಚ್ಚು ಜನರು ಧ್ಯಾನಮಾಡಲಾರಂಭಿಸಿದ್ದಾರೆ. ಕಾಲವು ಅದರದೇ ಆದ ಪ್ರಭಾವವನ್ನು ಬೀರುತ್ತದೆ.

ಮಹರ್ಷಿ ಅಮರರವರ ಕೆಲಸಗಳ ಬಗ್ಗೆ ನಾವು ಮಾತನಾಡಿದಾಗ ಅದು ಉತ್ಪ್ರೇಕ್ಷೆ ಎನಿಸಬಹುದು, ಆದರೆ ಅದು ಉತ್ಪ್ರೇಕ್ಷೆಯಲ್ಲ. ಅವರು ಸಂತ ಏಕನಾಥರಾಗಿ ಕೆಳಬಂದಿದ್ದಾಗ, ಕೃಷ್ಣ ಪರಮಾತ್ಮನು ಒಬ್ಬ ಬಾಲಕನ ರೂಪತಳೆದು 12 ವರ್ಷಗಳ ಕಾಲ ಅವರ ಮನೆಯಲ್ಲಿ ಕೆಲಸಮಾಡಿದನು! ಮಹರ್ಷಿ ಅಮರರವರು ಒಬ್ಬ ಮಹಾನ್ ಮಾಸ್ಟರ್ ಆಗಿದ್ದರೂ ಬೇರೆಯವರಿಗೆ ಅವರು ಆ ರೀತಿ ಕಾಣಿಸಿಕೊಳ್ಳುತ್ತಿರಲಿಲ್ಲ. ಜನರು ಅವರೊಂದಿಗೆ ಆರಾಮವಾಗಿ ಇರುವಂತೆ ಮತ್ತು ಅವರಿಗೆ ತುಂಬ ಹತ್ತಿರದವರು ಎಂದೆನಿಸುವಂತೆ ಅಮರರವರು ನಡೆದುಕೊಳ್ಳುತ್ತಿದ್ದರು. ಆ ಜನರೂ ಆಧ್ಯಾತ್ಮಿಕ ಉತ್ತುಂಗವನ್ನು ತಲುಪಬಹುದೆಂದು ಅಮರರವರು ಅವರಿಗೆ ಹೇಳುತ್ತಿದ್ದರು. ಹೇಳುವುದು ಮಾತ್ರವಲ್ಲದೆ ಅವರಿಗೆ ಮಾರ್ಗವನ್ನೂ ತೋರಿಸಿದರು – ಧ್ಯಾನದ ಮಾರ್ಗ. ಧ್ಯಾನದ ಕೊಡುಗೆಯೇ ಅವರು ನಮಗೆ ಕೊಟ್ಟ ಅತ್ಯಮೂಲ್ಯ ಕೊಡುಗೆ. ಅದು ವೈಯಕ್ತಿಕವಾಗಿ ನಮ್ಮನ್ನು ಅಧ್ಯಾತ್ಮಿಕತೆಯ ಎತ್ತರಕ್ಕೆ ಕೊಂಡೊಯ್ಯುತ್ತದೆ ಮತ್ತು ಸಾಮೂಹಿಕವಾಗಿ ಮನುಕುಲವನ್ನು ಬೆಳಕಿನ ಯುಗಕ್ಕೆ ಕೊಂಡೊಯ್ಯುತ್ತದೆ.

ಈ ದಿನದ ಭಾಷಣಕ್ಕಾಗಿ ನೆನ್ನೆ ರಾತ್ರಿ ಸಿದ್ಧಗೊಳ್ಳುತ್ತಿದ್ದಾಗ, ನಮ್ಮ ವಾಲಂಟಿಯರ್ ಒಬ್ಬರಿಂದ ಒಂದು ಸಂದೇಶ ಬಂದಿತು. "ನಾನು (ಗುರೂಜಿ) ಹುಟ್ಟುವ ಮೊದಲೇ ಋಷಿಗಳು ನನಗೆ ವಿಶೇಷ ತರಬೇತಿಯನ್ನು ನೀಡಿದ್ದರು. ಅವರು ನನಗೆ ವಿಶೇಷವಾದ ಗಮನ ಕೊಟ್ಟು ಹಲವಾರು ವರ್ಷಗಳ ಕಾಲ ತರಬೇತಿ ನೀಡಿದ್ದಾರೆ. ನಿರಾಶೆ ಹೊಂದದಿರಲು ಮತ್ತು ಜೀವನದ ಬಗ್ಗೆ ಕಹಿ ಭಾವನೆ ಹೊಂದದಿರಲು ತರಬೇತಿ ನೀಡಿದ್ದಾರೆ," ಎಂದು ಗುರೂಜಿಯವರು ಒಮ್ಮೆ ತಮ್ಮ ಬಗ್ಗೆಯೇ ಹೇಳಿದ್ದರು ಎಂಬ ಸಂದೇಶ ನಮ್ಮ ವಾಲಂಟಿಯರ್ ಇಂದ ಬಂದಿತು. ಗುರೂಜಿಯವರು ಜೀವನದಲ್ಲಿ ಎಷ್ಟೊಂದು ಕಷ್ಟವನ್ನು ಅನುಭವಿಸಬೇಕಾಗಿ ಬಂದರೂ ಅವರು ಎಂದಿಗೂ ಮನಸ್ಸನ್ನು ಕಹಿ ಮಾಡಿಕೊಳ್ಳಲಿಲ್ಲ. ಅವರು ಮುಂದುವರಿದು ಹೇಳಿದರು, "ಕಷ್ಟಗಳನ್ನು ಸಹಿಸುವುದಕ್ಕೆ ಮತ್ತು ಭೌತಿಕ ಹಾಗೂ ಸೂಕ್ಷ್ಮ ಮಟ್ಟಗಳೆರಡರಲ್ಲೂ ಕೆಲಸ ಮಾಡುವುದಕ್ಕೆ ಅವರು ತರಬೇತಿ ನೀಡಿದರು. ನನ್ನದೇ ಜೀವನವನ್ನು ನಾನು ಹಿಂದಿರುಗಿ ನೋಡಿದಾಗ, ನನ್ನ ಜೀವನದಲ್ಲಿ ನಡೆದ ಪ್ರತಿಯೊಂದೂ – ಒಳ್ಳೆಯದು ಮತ್ತು ಅಷ್ಟೇನೂ ಒಳ್ಳೆಯದಲ್ಲದ್ದು – ನನ್ನನ್ನು ಇಲ್ಲಿಗೆ ಕರೆತರುವುದ–ಕ್ಕಾಗಿಯೇ ರೂಪಿಸಲಾಗಿದ್ದವು ಎಂದು ನನಗೀಗ ಅರಿವಾಗುತ್ತಿದೆ. ಅವು ನನಗೆ ಒಂದು ರೀತಿಯ ಸಿದ್ಧತೆಯಾಗಿತ್ತು." ಅವರು ಮುಂದುವರೆದು ಹೇಳುತ್ತಾರೆ, "ನಾನು ಅವರನ್ನು ಮೊದಲ ಬಾರಿಗೆ ಭೇಟಿಯಾದಾಗ, ಅದು ಹೇಗೋ ಅವರನ್ನು ಬಹು ದೊಡ್ಡ ಬೆಳಕಿನ ಹಾಗೆ ಕಂಡೆ. ಅವರು ದೊಡ್ಡ ಬೆಳಕಿನ ವಲಯವೇ ಆಗಿದ್ದರು ಮತ್ತು ನಾನು ಅದೇ ಬೆಳಕಿನ ಒಂದು ಕಣವಾಗಿದ್ದೆ. ಅಮರರವರು ಮತ್ತು ನಾನು ಒಂದು ತಂಡದ ರೀತಿಯಲ್ಲಿ ಕೆಲಸ ಮಾಡುತ್ತೇವೆಂದು ನನಗೀಗ ಅರಿವಾಗಿದೆ. ಅವರು ಬಹು ದೊಡ್ಡ ವ್ಯಕ್ತಿ, ನಾನೊಬ್ಬ ಸಣ್ಣ ಕಾರ್ಯಕರ್ತ, ಆದರೂ ನಾವೊಂದು ತಂಡ. ಕಳೆದ ಕಾಲಚಕ್ರದಲ್ಲಿ ಕೂಡ, ಅವರು ಮೊದಲಿಗೆ ಬಂದು ಪೂರ್ವ ಸಿದ್ಧತೆಗಳನ್ನು ಮಾಡಿದ್ದರು ನಂತರ ನಾನು ಕೆಲಸ ಪ್ರಾರಂಭಿಸಿ ಕೇಂದ್ರವೊಂದನ್ನು ಸ್ಥಾಪಿಸಿದ್ದೆ. ಈ ಕಾಲಚಕ್ರದಲ್ಲೂ ಅದೇ ರೀತಿ ಆಗಿದೆ." ಗುರೂಜಿಯವರು ಹೇಳಿದ ಯಥಾವತ್ತಾದ ಈ ಮಾತುಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಬಯಸಿದೆ ಅಷ್ಟೆ. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರು – ವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲೀಷ್‌ನಲ್ಲಿ (ವರ್ಷಕ್ಕೆ ರೂ. 2500), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1300) ಪಾಠಗಳನ್ನು ಕಳುಹಿಸಲಾಗುವುದು. ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ವಾರ್ಷಿಕ ರಿಜಿಸ್ಟ್ರೇಶನ್ ಫ್ಲೀಯು ರೂ. 4500. ಈ ಫ್ಲೀನಲ್ಲಿ ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಮತ್ತು ಪಠ್ಯಪುಸ್ತಕಗಳು ಸೇರಿದೆ.

ನಂತರ, ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫ್ಲೀ ಇಂಗ್ಲೀಷ್ (ವರ್ಷಕ್ಕೆ ರೂ. 2000), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 900). ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫ್ಲೀಯು ರೂ. 3500. ಈ ಫ್ಲೀನಲ್ಲಿ ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಸೇರಿದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಲೈಟ್ ಏಜ್ ಫೌಂಡೇಶನ್(ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿ ಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಶ್ರೀ ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

25–02–2018

ಎಲ್ಲ ಕಾರ್ಯಕರ್ತರು ಒಂದು ಭಾನುವಾರದಂದು ಇಲ್ಲಿ ಸೇರಿ ವಿಶ್ವ ಚಾನಲ್ಸ್ ದಿನದ ತಮ್ಮ ಅನುಭವಗಳನ್ನು ಹಂಚಿಕೊಡರು. ಅನುಭವಗಳನ್ನು ಹೇಳುವ, ಕೇಳುವ ಮತ್ತು ವಿಚಾರ ವಿನಿಮಯಮಾಡುವ ಚಟುವಟಿಕೆಗಳಲ್ಲಿ ಎರಡೂವರೆ ಗಂಟೆಗಳಿಗೂ ಹೆಚ್ಚು ಸಮಯ ಕಳೆದವು. ಆದರೂ ಯಾರಿಗೂ ಅದು ಹೆಚ್ಚಾಯಿತು ಅನ್ನಿಸಲಿಲ್ಲ, ಬೇಸರ ತರಿಸಲಿಲ್ಲ ಹಾಗೂ ಯಾರೂ ಆಯಾಸಗೊಳ್ಳಲಿಲ್ಲ. ಇನ್ನೂ ಬಹಳ ಸಮಯ ಮಾತನಾಡುವುದನ್ನು ಮುಂದುವರಿಸಬಹುದಿತ್ತು, ಹಾಗೆ ಮಾಡಿದ್ದರೂ ನಾವು ಉಲ್ಲಾಸದಿಂದಲೇ ಇರುತ್ತಿದ್ದೆವು. ಆಧ್ಯಾತ್ಮಿಕ ವಿಷಯಗಳ ಬಗ್ಗೆ ನಾವು ವಿನಿಮಯ ಮಾಡಿಕೊಳ್ಳುತ್ತಿದ್ದಾಗ ಅದು ಹೇಗೋ ನಾವು ದೈವದ ಇರುವಿಕೆಯೊಂದಿಗೆ ಇರುತ್ತೇವೆ. ನಾವು ದೇವರೊಂದಿಗೆ ಸಂಪರ್ಕಗೊಂಡಿರುತ್ತೇವೆ, ಆಗ ಸಮಸ್ಯೆಗಳೇ ಇರುವುದಿಲ್ಲ. ಸಮಯದ ಅರಿವೇ ಇಲ್ಲದೆ ಗಂಟೆಗಟ್ಟಲೆ ಮಾತನಾಡುತ್ತಲೇ ಇರುತ್ತೇವೆ. ಆ ದಿನ ಆಗಿದ್ದು ಅದೇ ರೀತಿ. ಕಾರ್ಯಕರ್ತರು ಅದ್ಭುತ ಅನುಭವಗಳನ್ನು ಹಂಚಿಕೊಂಡರು.

ಕಾರ್ಯಕರ್ತರೊಬ್ಬರು ಹಂಚಿಕೊಂಡ ಮನಮುಟ್ಟುವ ಅನುಭವವೊಂದನ್ನು ನಿಮ್ಮೊಂದಿಗೆ ಹಂಚಿಕೊಳ್ಳಬಯಸುತ್ತೇನೆ. ಆ ದಿನದಂದು ಶಾಲೆಯೊಂದರಲ್ಲಿ ಲೈಟ್ ಚಾನಲಿಂಗ್ ಸೆಷನ್ ನಂತರ, ಅದರಲ್ಲಿ ಭಾಗವಹಿಸಿದ್ದ ಶಿಕ್ಷಕರೊಬ್ಬರು, ಕಣ್ಣಿನಲ್ಲಿ ನೀರು ತುಂಬಿಕೊಂಡು ಅತ್ಯಂತ ಕೃತಜ್ಞತೆಯೊಂದಿಗೆ ತಮ್ಮ ಅನುಭವವನ್ನು ಹೇಳಿಕೊಂಡರು. ಅವರು ಹಲವಾರು ತಿಂಗಳುಗಳಿಂದ ಒಂದು ರೀತಿಯ ನೋವಿನಿಂದ ನರಳುತ್ತಿದ್ದರು. ಆ ದಿನದ ಲೈಟ್ ಚಾನಲಿಂಗ್ ಸೆಷನ್ ನಂತರ ಅವರ ನೋವು ಮಾಯವಾಯಿತು. ಬೆಳಕಿನಲ್ಲಿ ಹೀಲಿಂಗ್ ಚೈತನ್ಯಗಳಿರುವುದು ನಮಗೆ ತಿಳಿದಿದೆ. ಅವರಿಗೆ ತತ್‌ಕ್ಷಣದ ಹೀಲಿಂಗ್‌ನ ಅನುಭವವಾಯಿತು! ಅದೊಂದು ರೀತಿಯ ಪವಾಡವಾಗಿತ್ತು!

ಹೀಲಿಂಗ್ ಪ್ರಕ್ರಿಯೆಯಲ್ಲಿ ಕರ್ಮಗಳ ನಿರ್ವಹಣೆಯೂ ಸೇರಿರುತ್ತದೆ. ಹೀಲಿಂಗ್ ಒಂದು ಆಧ್ಯಾತ್ಮಿಕ ಪ್ರಕ್ರಿಯೆ ಎಂದು ಗುರೂಜಿಯವರು ತಿಳಿಸಿದ್ದರು. ಆದ್ದರಿಂದಲೇ ಹೀಲಿಂಗ್‌ಅನ್ನು ಆಲೋಚಿಸದೆ ಮಾಡಬಾರದು. ಅದೊಂದು ಶ್ರೇಷ್ಠವಾದ ಕಾರ್ಯವೇನೋ ಹೌದು. ಹೀಲಿಂಗ್ ಪಡೆಯುತ್ತಿರುವ ವ್ಯಕ್ತಿಯ ಕರ್ಮದ ಸಣ್ಣ ಭಾಗವು ನಮಗೆ ಬರುತ್ತದೆಂದು ಗುರೂಜಿಯವರು ಹೇಳಿದ್ದರು. ಆದರೆ ಅದರ ಬಗ್ಗೆ ನಾವು ಚಿಂತೆ ಮಾಡಬೇಕಾಗಿಲ್ಲ. ಆ ಕರ್ಮವನ್ನು ಧ್ಯಾನ ಮಾಡಿ ನಿವಾರಣೆಮಾಡಿಕೊಳ್ಳಬಹುದು. ಆದ್ದರಿಂದಲೇ ಹೀಲರ್‌ಗಳು ಕ್ರಮಬದ್ಧವಾಗಿ ಧ್ಯಾನ ಮಾಡಬೇಕು.

ಹೀಲಿಂಗ್ ಪ್ರಕ್ರಿಯೆಯಲ್ಲಿ ಹೀಲಿಂಗ್ ಪಡೆಯುತ್ತಿರುವ ವ್ಯಕ್ತಿಗೆ ಒಂದು ರೀತಿಯ ಪಾಠವೂ ಇರುತ್ತದೆ. ಹೀಲಿಂಗ್ ಚೈತನ್ಯಗಳು ಆ ವ್ಯಕ್ತಿಗೆ ಆಳವಾದ ಮಟ್ಟದಲ್ಲಿ ಅದರದೇ ಆದ ರೀತಿಯಲ್ಲಿ ತಿಳುವಳಿಕೆಯನ್ನು ನೀಡುತ್ತವೆ. ಬಹುಶಃ ಬದಲಾಗುವುದರಲ್ಲಿರುವ ಮಹತ್ವವನ್ನು ಅವು ಆ ವ್ಯಕ್ತಿಗೆ ಹೇಳಬಹುದು. ವ್ಯಕ್ತಿಯೊಬ್ಬನು ಯಾವುದಾದರೊಂದು ಕಾರಣದಿಂದ ಕಷ್ಟ ಪಡುತ್ತಿರಬಹುದು, ಅದು ಕರ್ಮದ ಕಾರಣವಾಗಿರಬಹುದು. ಹೀಲಿಂಗ್ ಚೈತನ್ಯಗಳು, ಆ ವ್ಯಕ್ತಿಗೆ ಬದಲಾಗುವಂತೆ, ಪರಿವರ್ತನೆಗೊಳ್ಳುವಂತೆ ತಿಳಿಸುವ ಪ್ರಯತ್ನ ಮಾಡಬಹುದು. ಆ ವ್ಯಕ್ತಿ ಅದಕ್ಕೆ ಒಪ್ಪಿದರೆ ಅವನ ಪರಿವರ್ತನೆ ಪ್ರಾರಂಭವಾಗುತ್ತದೆ, ಆಗ ಹೀಲಿಂಗ್ ಶೀಘ್ರವಾಗಿ ಆಗುತ್ತದೆ.

ಹೀಲಿಂಗ್ ಮಾಡುವುದರ ಬಗ್ಗೆ ಎಚ್ಚರಿಕೆಯಿಂದಿರಬೇಕೆಂದು ಕೂಡ ಗುರೂಜಿಯವರು ಹೇಳಿದ್ದರು. ಅದರ ಬಗ್ಗೆ ತುಂಬ ವಿವೇಚನೆಯಿಂದಿರಬೇಕೆಂದು ಮಾರ್ಗದರ್ಶನ ನೀಡಿದ್ದರು. ನಮ್ಮ ಅಂತರ್‌ವಾಣಿಯಂತೆ ನಡೆಯಲು ತಿಳಿಸಿದ್ದರು. ಆದರೆ ವ್ಯಕ್ತಿಯೊಬ್ಬರಿಗೆ ಹೀಲಿಂಗ್ ಚೈತನ್ಯ ಕಳಿಸಲು ಪ್ರಾಮಾಣಿಕ ಕೋರಿಕೆ ಬಂದರೆ ನಾವು ಹಿಂಜರಿಯಬೇಕಾಗಿಲ್ಲ. ಆದರೆ ಅದರ ಬಗ್ಗೆ ಹೇಳಿಕೊಳ್ಳುತ್ತಾ ಹೋಗಬಾರದು, ಅದರ ಬಗ್ಗೆ ಪ್ರಚಾರ ಮಾಡಬಾರದು.

ಹೀಲಿಂಗ್ ಎಂದಿಗೂ ವ್ಯಾಪಾರವಾಗಬಾರದು. ಅದು ಪ್ರೀತಿಯ ನೆಲೆಯ ಮೇಲೇ ನಡೆಯಬೇಕು. ಹೀಲಿಂಗ್‌ಗೆ ಬಳಸುವ ಚೈತನ್ಯಗಳು ನಮಗೆ ಲಭ್ಯವಿವೆ. ಆ ಚೈತನ್ಯಗಳನ್ನು ದೇವರು ಒದಗಿಸುತ್ತಾನೆ. ನಾವು ಎಂದಿಗೂ ಹೀಲಿಂಗ್ ಮಾಡುವುದಿಲ್ಲವೆನ್ನುವುದನ್ನು ನೆನಪಿಡಬೇಕು. ನಾವು ಒಂದು ಚಾನಲ್ ಮಾತ್ರ, ನಿಜವಾದ ಹೀಲಿಂಗ್ ಮಾಡುವುದು ಹೀಲಿಂಗ್ ಚೈತನ್ಯಗಳು. ಸತ್ಯವಾದ ಈ ಸಂಗತಿಯ ಅರಿವಿದ್ದರೆ ಯಾವುದೇ ಸಮಸ್ಯೆಗಳಿರುವುದಿಲ್ಲ. ನಾವು ಹೀಲಿಂಗ್ ಕೇಂದ್ರಗಳನ್ನು ತೆರೆದು, ಹಣ ತೆಗೆದುಕೊಂಡು ಎಲ್ಲರನ್ನೂ ಹೀಲ್ ಮಾಡುತ್ತಾ ಹೋಗಬಾರದು. ಹಾಗೆ ಮಾಡಿದರೆ ಸಹಜವಾಗಿಯೇ ಕರ್ಮಗಳನ್ನು ಪಡೆಯುತ್ತೇವೆ. ಆದರೆ ಇವೆಲ್ಲವೂ, ನಾವು ಒಟ್ಟಾರೆಯಾಗಿ ಹೀಲಿಂಗ್ ಚೈತನ್ಯಗಳನ್ನು ಕಳಿಸುವುದನ್ನೇ ನಿಲ್ಲಿಸುವಷ್ಟರ ಮಟ್ಟಿಗೆ ನಮ್ಮನ್ನು ಭೀತಿಗೊಳಿಸಬಾರದು. ಅಂತಹ ಅತಿರೇಕದ ನಿರ್ಧಾರಗಳು ನಮಗೆ ಬೇಡ. ಯಾವುದೇ ರೀತಿಯ ಅತಿರೇಕಗಳನ್ನು ತಪ್ಪಿಸಬೇಕೆಂದು ಗುರೂಜಿಯವರು ಹೇಳುತ್ತಿದ್ದರು. ಸಮತೋಲನದ ವಿಧಾನ ಆಧ್ಯಾತ್ಮಿಕವಾದುದು.

ಬೇರೆಯವರಿಗೆ ಹೀಲಿಂಗ್ ಚೈತನ್ಯಗಳನ್ನು ಕಳಿಸುವಾಗ, ಮೊದಲಿಗೆ ನಾವು ಋಷಿಗಳನ್ನು ಪ್ರಾರ್ಥಿಸುತ್ತೇವೆ, ನಂತರ ಇಲ್ಲಿರುವ ಹೀಲಿಂಗ್ ಚೈತನ್ಯಗಳ ಮೇಲ್ವಿಚಾರಣೆ ವಹಿಸಿರುವ ಸಂತೋಷಿ ದೇವಿಯನ್ನು ಪ್ರಾರ್ಥಿಸುತ್ತೇವೆ. ಈ ಚೈತನ್ಯಗಳನ್ನು ಮಾಸ್ಟರ್‌ಗಳು ಸಂಗ್ರಹಿಸಿದ್ದಾರೆ. ಅದರಲ್ಲಿ ವಿವಿಧ ರೀತಿಯ ಚೈತನ್ಯಗಳಿವೆಯೆಂದು ಗುರೂಜಿಯವರು ಹೇಳುತ್ತಿದ್ದರು. ಬೇರೆ ಬೇರೆ ರೀತಿಯ ಸಮಸ್ಯೆಗಳಿಗೆ ಅಥವ ಕಾಯಿಲೆಗಳಿಗೆ ಬೇರೆ ಬೇರೆ ರೀತಿಯ ಚೈತನ್ಯಗಳು ಬೇಕು. ಪ್ರತಿಯೊಬ್ಬ ವ್ಯಕ್ತಿಗೆ ಯಾವ ರೀತಿಯ ಚೈತನ್ಯಗಳನ್ನು ಎಷ್ಟು ಪ್ರಮಾಣದಲ್ಲಿ ಕಳಿಸಬೇಕೆನ್ನುವುದು ಸಂತೋಷಿದೇವಿಗೆ ತಿಳಿದಿದೆ. ನಮ್ಮ ಕೆಲಸ ಸುಲಭ, ಪ್ರಾರ್ಥಿಸಬೇಕು ಮತ್ತು ಚೈತನ್ಯಗಳನ್ನು ಕಳಿಸಬೇಕು, ಅಷ್ಟೆ. ■

## ಪ್ರಶ್ನೆಗಳು ಮತ್ತು ಉತ್ತರಗಳು

ಸಂ: ಶೋಭಾ ಕೆ. ರಾವ್; ಅನು: ಪಾಂಡುರಂಗ

**ಪ್ರ: ಸಮಾಧಿ ಅನುಭವದ ನಂತರ ಏನಾಗುತ್ತದೆ?**

ಉ: ಸಾಧನೆಯಲ್ಲಿ ಸಮಾಧಿ ಅನುಭವವೇ ಪ್ರಾರಂಭ, ಎಂದು ಅಮರರವರು ಹೇಳಿದ್ದರು. ಸಮಾಧಿ ಅನುಭವದ ನಂತರ ಅನೇಕ ಹಂತಗಳಿವೆ. ಇವುಗಳಲ್ಲಿ ಬಹಳ ಮುಖ್ಯವಾದ ಹಂತ 'ಜ್ಞಾನೋದಯ' (Enlightenment). ಜ್ಞಾನೋದಯದ ನಂತರವೂ ಸಾಧನೆ ಕೊನೆಗೊಳ್ಳುವುದಿಲ್ಲ. ಸಮಾಧಿಯ ಅನುಭವ ಅಲ್ಪ ಸಮಯದ್ದೇ ಆದರೂ ಅದರಿಂದ ನಮ್ಮ ವರ್ತನೆಗಳು ಬದಲಾಗುತ್ತವೆ. ನಮ್ಮ ಜೀವನದ ಪ್ರತಿಯೊಂದು ವಿವರದಲ್ಲೂ ಸಮಾಧಿ ತಾನಾಗಿಯೇ ವ್ಯಕ್ತಗೊಳ್ಳುತ್ತದೆ. ಜನರು ಸಹ ನಮ್ಮಲ್ಲಿ ಆದ ಬದಲಾವಣೆಗಳನ್ನು ಗಮನಿಸುತ್ತಾರೆ. ಆತ್ಮಕ್ಕೆ ಸಮಾಧಿಯ ಅನುಭವವಾಗುತ್ತದೆ. ಆದರೆ, ದೇಹ, ಮನಸ್ಸು ಮತ್ತು ಬುದ್ಧಿಯ ಪ್ರತಿಯೊಂದು ಕಣಗಳೂ ಸಮಾಧಿಯನ್ನು ಅನುಭವಿಸುತ್ತವೆ. ದಯವಿಟ್ಟು ಈ ಸುಂದರವಾದ ಅಂಶವನ್ನು ಗುರುತು ಮಾಡಿಕೊಳ್ಳಿ. ದೇಹವೂ ಕೂಡ ಸಮಾಧಿಯ ಅನುಭವವನ್ನು ಪಡೆದುಕೊಂಡು ನಿಶ್ಚಲತೆಯನ್ನು ತಲುಪುತ್ತದೆ. ಆಗ ನಮಗೆ ನಿದ್ದೆ ಬರುವ ಹಾಗೆ ಆಗುತ್ತದೆ. ಇದು ಕೆಲವು ಕ್ಷಣಗಳವರೆಗೆ ಮಾತ್ರ. ನಾವು ನಿದ್ದೆಗೆ ಮಣಿಯದೆ ಎಚ್ಚರವಾಗಿದ್ದು ನಮ್ಮ ಅರಿವನ್ನು ವಿಸ್ತರಿಸಿಕೊಳ್ಳಬೇಕು. ಆಗ ನಮಗೆ ಸಮಾಧಿಯ ಅನುಭವ ಆಗುತ್ತದೆ. ಕೇವಲ ಆತ್ಮ ಸಮಾಧಿಯ ಅನುಭವ ಪಡೆದುಕೊಳ್ಳುವುದಷ್ಟೆ ಸಾಕಾಗುವುದಿಲ್ಲ. ನಾವು ಸಮಾಧಿಯ ಸ್ಥಿತಿಯನ್ನು ತಲುಪಿದಾಗ ನಮ್ಮ ಜೀವನದ ಜವಾಬ್ದಾರಿಯನ್ನು ದೇವರೇ ವಹಿಸಿಕೊಳ್ಳುತ್ತಾನೆ. ಋಷಿಗಳಲ್ಲದೆ ದೇವರೂ ಸಹ ನಮ್ಮನ್ನು ಗಮನಿಸಲು ಪ್ರಾರಂಭಿಸುತ್ತಾನೆ. ಅವನು ನಮಗೆ ಸಹಾಯ ಮಾಡುತ್ತಾ ಮುನ್ನಡೆಸುತ್ತಾನೆ ಮತ್ತು ರಕ್ಷಿಸುತ್ತಾನೆ. ಇವೆಲ್ಲವುಗಳ ಅರಿವು ನಮಗೆ ಇರುವುದಿಲ್ಲವಾದರೂ, ಬಹಳಷ್ಟು ಚಟುವಟಿಕೆಗಳು ನಡೆಯುತ್ತಿರುತ್ತವೆ, ಎಲ್ಲ ದೈವೀ ಶಕ್ತಿಗಳ ಬೆಂಬಲ ನಮಗೆ ಇರುತ್ತದೆ. ಸಮಾಧಿ ಅನುಭವದ ನಂತರ, ಜೀವನ ಬದಲಾಗುತ್ತದೆ, ಈ ಬದಲಾವಣೆಗಳಿಗೆ ಅನುವು ಮಾಡಿಕೊಡಬೇಕು. ಇದು ಬಹಳ ಮುಖ್ಯವಾದ ಅಂಶ. ನಮಗೆ ಅರಿವಿಲ್ಲದೆಯೇ ಅನೇಕ ಕಾರಣಗಳಿಂದ ನಾವು ಹಿಂದಿನ ಸ್ಥಿತಿಗೇ ಮರಳುತ್ತೇವೆ. ಈ ರೀತಿ ಆದರೆ, ಇದು ಸೋಲೇನೂ ಅಲ್ಲ, ಆದರೆ ಇದು ಒಂದು ರೀತಿಯಲ್ಲಿ ಹಿಂದೆ ಸರಿದಂತೆ. ಸಮಾಧಿ ಅನುಭವದ ನಂತರ ನಮ್ಮ ಶುದ್ಧತೆಯು ಉನ್ನತ ಮಟ್ಟದ್ದಾಗಿರುತ್ತದೆ. ನಮ್ಮಲ್ಲಿನ ಶುದ್ಧತೆಯನ್ನು ನಮ್ಮ ಮುಖದಲ್ಲಿ, ನಮ್ಮ ಚಲನವಲನಗಳಲ್ಲಿ ಮತ್ತು ನಾವು ಮಾತನಾಡುವ ಪ್ರತಿಯೊಂದು ಪದಗಳಲ್ಲಿ ಯಾರಾದರೂ ನೋಡಬಹುದು. ಸಮಾಧಿಯ ಅನುಭವ ಪಡೆಯುವುದು ಅಷ್ಟು ಸುಲಭವಲ್ಲ. ನಮ್ಮಲ್ಲಿ ಬಹಳಷ್ಟು ಜನರು ಕೆಲ ಕ್ಷಣಗಳ ಮಟ್ಟಿಗಾದರೂ ಸಮಾಧಿಯ ಅನುಭವವನ್ನು ಪಡೆದಿದ್ದೇವೆ. ಸಮಾಧಿ ಅನುಭವ ಪಡೆದ ನಂತರ ನಾವು ದೇವರೊಂದಿಗೆ ಅತಿ ಸನಿಹದಿಂದ ಶ್ರುತಿಗೊಂಡಿರುತ್ತೇವೆ. ಅದು ಹೇಗೊ ಎರಡು ದಿನಗಳ ನಂತರ ಏನಾಗಬಹುದೆಂದು ನಮಗೆ ಗೊತ್ತಾಗುತ್ತದೆ. ಇಂಥ ಸಾಮರ್ಥ್ಯಗಳು ಸಹಜವಾಗಿಯೇ ಕೆಲಸಮಾಡಲಾರಂಭಿಸುತ್ತವೆ. ಸಮಾಧಿಯ ನಂತರ ನಾವು ವಿಸ್ತೃತ ಮನಸ್ಥಿತಿಯಲ್ಲಿದ್ದಾಗ ಬೇರೆಯವರ ಅಪರಿಪೂರ್ಣತೆಯನ್ನು ಒಪ್ಪಿಕೊಂಡು ಸಹಬಾಳ್ವೆ ನಡೆಸುತ್ತೇವೆ. ಉನ್ನತ ವಾಸ್ತವತೆಗಳನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳುತ್ತೇವೆ. ವಿಸ್ತೃತ ಮನಸ್ಥಿತಿ ನಮಗೆ ಹೊಸ ಅನುಭವಗಳನ್ನು ತಂದು ಕೊಡುತ್ತದೆ. ಹೊಸ ಅನುಭವಗಳು ಹೊಸ ಜ್ಞಾನವನ್ನು ತಂದು ಕೊಡುತ್ತವೆ. ತಕ್ಷಣದಲ್ಲಿ ನಮಗೆ ಈ ಜ್ಞಾನವನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ, ಕಾರಣ ಈ ಜ್ಞಾನವು ಚೈತನ್ಯಗಳ ರೂಪದಲ್ಲಿ ಅಥವ ಬೆಳಕಿನ ರೂಪದಲ್ಲಿ ನಮ್ಮ ಶಾರೀರಕ ವ್ಯವಸ್ಥೆಯಲ್ಲಿರುತ್ತದೆ. ಇದ್ದಕ್ಕಿದ್ದಂತೆ ಒಂದು ದಿನ ಮಿಂಚಿನಂತೆ ಈ ಜ್ಞಾನ ನಮ್ಮ ಬುದ್ಧಿಗೆ ಹರಿದು ಬರುತ್ತದೆ. ಬುದ್ಧಿಗೆ ಅದನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಚೈತನ್ಯಗಳ ಮೂಲಕ ಹರಿದು ಬಂದ ಎಲ್ಲ ಜ್ಞಾನವನ್ನು ಪದಗಳಾಗಿ ಪರಿವರ್ತಿಸಲಾಗುವುದಿಲ್ಲ, ಆದರೂ ಸಹ ಇದು ನಮಗೆ ಮಹತ್ತರವಾದುದು. ಸಮಾಧಿ ಅನುಭವದ ನಂತರ ಯಾರ ಜೊತೆಗೂ ಸಂಘರ್ಷಗಳು ಇರುವುದಿಲ್ಲ, ಆದರೆ ನಮ್ಮೊಳಗೇ ಕೆಲವು ಘರ್ಷಣೆಗಳು ಇದ್ದೆ ಇರುತ್ತವೆ. 'ಗೀತೆ' ಯಲ್ಲಿ ಹೇಳಿರುವ 'ಧರ್ಮಕ್ಷೇತ್ರೆ' ಅನ್ನುವುದು ನಮ್ಮೊಳಗೇ ಇದೆ. ನಮ್ಮ ಅಹಂಗಳಿಂದಾಗಿ ನಮ್ಮೊಳಗಿನ ಘರ್ಷಣೆಗಳಿಗೆ ಪರಿಹಾರ ಕಂಡುಕೊಳ್ಳವುದಕ್ಕೆ ಸಾಧ್ಯವಾಗುವುದಿಲ್ಲ. ಕೆಲವರಿಗೆ ಇದು ತುಂಬಾ ಸುಲಭ, ಇನ್ನು ಕೆಲವರಿಗೆ ಇದು ಸಾಧ್ಯವೇ ಇಲ್ಲವೆಂದು ತೋರುತ್ತದೆ.


**ಪ್ರ: ಪರಿವರ್ತನೆ, ಅಂದರೆ ಪ್ರಳಯವು, ಯಾವಾಗಲೂ ಹಿಂಸಾತ್ಮಕವಾಗಿರುತ್ತದೆಯೇ?**

ಉ: ಅದು ಹಿಂಸಾತ್ಮಕವಾಗಿರಬೇಕಿಲ್ಲ. ಈಗ ನಾವು ಪರಿವರ್ತನಾ ಸಮಯದಲ್ಲಿ ಸಾಗುತ್ತಿದ್ದೇವೆ. ಮುಂದೆ ಮಹತ್ತರ ಬದಲಾವಣೆಗಳಾಗುತ್ತವೆಂಬ ಆಶಯವನ್ನು ಹೊಂದಿದ್ದೇವೆ. ಎಷ್ಟು ಪ್ರಮಾಣದ ನೋವು ಮತ್ತು ವಿನಾಶ ಸಂಭವಿಸುತ್ತದೆ ಎಂಬ ಅರಿವು ನಮಗಿಲ್ಲ. ಇವುಗಳನ್ನು ತಪ್ಪಿಸಬಹುದು, ಆದರೆ ಇದು ನಮ್ಮನ್ನವಲಂಬಿಸಿದೆ. ಯಾವ ಮಟ್ಟದಲ್ಲೇ ಆಗಲಿ, ಜಾಗತಿಕ ಮಟ್ಟದಲ್ಲಾಗಲಿ ಅಥವಾ ವ್ಯಕ್ತಿಯ ಮಟ್ಟದಲ್ಲಾಗಲಿ, ನಮಗೆ ನಾವೇ ನೋವು ಅಥವಾ ಹಿಂಸೆಯನ್ನು ತಂದುಕೊಳ್ಳುತ್ತೇವೆ. ಈ ಕಾರಣದಿಂದಲೇ 'ಸಿದ್ಧರಾಗಿ' ಎಂದು ನಾವು ಯಾವಾಗಲೂ ಹೇಳುವುದು. ಈ ಪರಿವರ್ತನೆಯು ಒಂದು ಆಧ್ಯಾತ್ಮಿಕ ಪ್ರಕ್ರಿಯೆಯೆಂದು ಅನುಮೋದಿಸುತ್ತೇವೆ. ಇದೊಂದು ದುರ್ಜನರು ಮತ್ತು ಸಜ್ಜನರ ನಡುವೆ ನಡೆಯುತ್ತಿರುವ ಧರ್ಮ ಯುದ್ಧ. ಈ ಪ್ರಕ್ಷುಬ್ಧತೆಯನ್ನು ನಾವು ನೋಡಬಹುದು. ■

### ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Higher Communication & Other Realities | 100/- |
| Light Body & Other Realities | 100/- |
| Master-Pupil Talks | 60/- |
| Master-Pupil Talks - Vol 2 | 75/- |
| iGuruji Vol 1,3,4 & 7 | each 150/- |
| iGuruji - Vol 2 | 120/- |
| iGuruji - Vol 5 | 100/- |
| iGuruji - Vol 6 | 75/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis-Vol 2 | 150/- |
| Channelled Knowledge from the Rishis-Vol 3 & 4 | each 200/- |
| Guruji Speaks Part - I & II | each 200/- |
| Guruji Speaks (Vol 3) | 150/- |
| Guruji Speaks (Vol 4) | 250/- |
| Guruji Speaks (Vol 5 & 7) | each 200/- |
| The Book of Reflections - Vol 1 & 2 | each 200/- |
| The Book of Reflections - Vol 3 | 150/- |
| Meditators on Meditations | 75/- |
| Meditators on Experiences | 75/- |
| Meditational Experiences - Vol 1 & 2 | each 150/- |
| Awareness | 60/- |
| Living in Light | 10/- |
| Light | 10/- |
| Quotes from the Rishis - Vol 1 & 2 | each 100/- |
| Pyramid Revelations | 100/- |
| Thus Spoke Guruji Krishnananda - Vol 1 | 200/- |
| Thus Spoke Guruji Krishnananda - Vol 2 | 250/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಋಷಿಗಳಿಂದ ಬಂದ ಜ್ಞಾನ – ಭಾಗ 2 | 150/- |
| ಗುರು–ಶಿಷ್ಯರ ಸಂಭಾಷಣೆ | 60/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ಬೆಳಕಿನ ಶರೀರ ಮತ್ತು ಇತರ ವಾಸ್ತವಗಳು | 100/- |
| प्रकाशवाट (Marathi) | 150/- |
| आयगुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| गुरु–शिष्य संवाद (Marathi) | 60/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| आत्मा का अवतरण (Hindi) | 50/- |
| தியானம் செய்வது எப்படி | 50/- |
| ஒளியின் வாயில்கள் | 200/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 100/- |

Published: 21st of Every Month. RNI. No. KARKAN/2003/13739 Regd. Postal Regn. No. KARN/BGE/1124/ 2017-2019
Date of posting Newsletter-25th or 27th or 29th of Every Month. Posted at Bangalore PSO, Bg-560026 No. of Pages-8



ಗುರೂಜಿ ಕೃಷ್ಣಾನಂದ (1939 - 2012)

## ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

## ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

## ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

## ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

## ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

## ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

## ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80-G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

# ಸಾಧಕರ ಆಧ್ಯಾತ್ಮಿಕ ಅನುಭವಗಳು ಮತ್ತು ಅವರ ಪತ್ರಗಳಿಂದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸ್ವರ್ಣಲತಾ

ಈ ಧ್ಯಾನದ ಮಾರ್ಗದ ಪರಿಚಯವಿಲ್ಲದ ನನ್ನ ಸ್ನೇಹಿತರೊಬ್ಬರು ತಮ್ಮ ಗೃಹಕೃತ್ಯದ ಕೆಲಸಗಳಲ್ಲಿ ಅತ್ಯಂತ ಒತ್ತಡದಿಂದಿದ್ದರು. ಕನಸಿನಂತಹ ಸ್ಥಿತಿಯಲ್ಲಿ ನನ್ನನ್ನು ಅವರು ಜಲದೇಹದಲ್ಲಿ ತಮ್ಮ ಕೊಠಡಿಯಲ್ಲಿ ಕಂಡು ಆಶ್ಚರ್ಯಪಟ್ಟರು. ಅವರಿಗೆ ನಾನು ಅವರನ್ನು ಅಂತರಮಾನಸಕ್ಕೆ ಕರೆದುಕೊಂಡು ಹೋಗಿ ಬಿಗಿಯಾಗಿ ಅಪ್ಪಿಕೊಂಡಂತೆ ಭಾಸವಾಯಿತು. ಮಾರನೆಯ ಬೆಳಿಗ್ಗೆ ಅವರ ಸುತ್ತ ದೊಡ್ಡದಾದ ಬಿಳಿಯ ಬೆಳಕು ಆವರಿಸಿರುವಂತೆ ಕಂಡರು. ನಂತರ ಮನಸ್ಸು ಹಗುರವಾಗಿ ಶಾಂತಿಯನ್ನನುಭವಿಸಿದರು. ಯಾವ ಭಯವಾಗಲೀ, ದ್ವೇಷವಾಗಲೀ, ದುಃಖವಾಗಲೀ ಅವರ ಹೃದಯದಲ್ಲಿರಲಿಲ್ಲ. ಗುರೂಜಿ ಹಾಗೂ ಪ್ರತಿಯೊಬ್ಬರಿಗೂ ವಂದನೆಗಳು.

– ಸುಧಾ ಹೆಚ್.ಎಮ್.

ರಾತ್ರಿಯ ವೇಳೆ ನನ್ನನ್ನು ಕಾಡುತ್ತಿದ್ದ ದುಃಸ್ವಪ್ನಗಳು ಈಗ ನಿವಾರಣೆಯಾಗಿವೆ. ಪ್ರಶಾಂತವಾಗಿ ನಿದ್ರಿಸಲು ಸಾಧ್ಯವಾಗಿದೆ. ಅದಕ್ಕೆ ಕಾರಣ ಧ್ಯಾನದ ಅಭ್ಯಾಸ ಮತ್ತು ಗುರೂಜಿಯವರ ಕೃಪೆ.

ನವೆಂಬರ್ 18, 2017 ರಂದು ನಾನು ಕನಸಿನಲ್ಲಿ ಗುರೂಜಿಯವರನ್ನು ಕಂಡೆ. ಆದರೆ ಅವರು ಏನು ಹೇಳಿದರೆಂಬುದು ನೆನಪಿಲ್ಲ. ಗುರೂಜಿಯವರ ದರ್ಶನ ಪಡೆದದ್ದಕ್ಕೆ ನಾನು ಧನ್ಯೆ.

– ಎ.ಎಸ್. ನಿರ್ಮಲ

ಪ್ರತಿದಿನ ಧ್ಯಾನದ ನಂತರ ನಾನು, ದಯೆಯುಳ್ಳವಳಾಗಿರಬೇಕು, ಪ್ರಶಾಂತವಾಗಿರಬೇಕು, ದೈವೀ ಪ್ರೀತಿಯನ್ನು ಹರಡಬೇಕು, ನನ್ನ ಮನಸ್ಸಿನ ತುಂಬಾ ಬೆಳಕೇ ತುಂಬಿರಬೇಕು ಎಂದು ಪ್ರಾರ್ಥಿಸುತ್ತೇನೆ. ನಾನು ಆತಂಕಗೊಳ್ಳುತ್ತಿದ್ದ ಅದೇ ಸನ್ನಿವೇಶಗಳಲ್ಲಿ ಶಾಂತವಾಗಿರಲು ನಿಧಾನವಾಗಿ ಈಗ ಸಾಧ್ಯವಾಗುತ್ತಿದೆ. ಈಗ ನಾನು ಹೆಚ್ಚು ಪ್ರೀತಿಸುವ ಸಹನಾಮಯಿಯಾಗಿದ್ದೇನೆ. ಚಿಕ್ಕ ಚಿಕ್ಕ ವಿಷಯಗಳಿಗೆ ತಲೆ ಕೆಡಿಸಿಕೊಳ್ಳುವುದೇ ಇಲ್ಲ. ಗುರೂಜಿಯವರು ಪ್ರೀತಿಯನ್ನು ಹೊರಹೊಮ್ಮಿಸಿ ಎಂದು ಹೇಳುತ್ತಿದ್ದಾಗ ಅದರ ಅರ್ಥವೇ ತಿಳಿದಿರಲಿಲ್ಲ. ಈಗ ನನ್ನ ಮೂಲಕ ಬೆಳಕು ಕೆಲಸ ಮಾಡಲು ಅನುವು ಮಾಡಿಕೊಡಲು ಸಾಧ್ಯವಾಗಿದೆ.

– ಶ್ರೇಯಾ ಶಶಾಂಕ

ಕೆಲವು ದಿನಗಳ ಹಿಂದೆ ಇ-ಮೇಲ್‌ಗಳನ್ನು ನೋಡುತ್ತಿದ್ದಾಗ, ಗುರೂಜಿಯವರು ಭೌತಿಕ ದೇಹ ಬಿಡುವ ಮೊದಲಿನ ಅವರೊಂದಿಗಿನ ಇ-ಮೇಲ್ ಸಂಭಾಷಣೆಗಳು ಸಿಕ್ಕಿದವು. ಅವರು ಬರೆದ ಪ್ರತಿ ಪದದಲ್ಲೂ ಅಪಾರ ಪ್ರೀತಿ ತುಂಬಿತ್ತು. ಎಲ್ಲವೂ ಸಣ್ಣ ಉತ್ತರಗಳೇ ಆದರೂ ಅದನ್ನು ಓದುವಾಗ ಕಣ್ಣಲ್ಲಿ ನೀರು ಬಂತು. 2012ರಲ್ಲಷ್ಟೇ ಸೇರಿದ ಹೊಸ ವಿದ್ಯಾರ್ಥಿಗೆ ಉತ್ತರಿಸಲೂ ಗುರೂಜಿಯವರು ಸಮಯ ಮಾಡಿಕೊಂಡಿದ್ದು ಆಶ್ಚರ್ಯಪಡಬೇಕಾದ ವಾಸ್ತವ.

– ವಿನಮ್ರ ಲೋಂಗಾನಿ

ಒಬ್ಬ ವ್ಯಕ್ತಿ ಯಾವಾಗಲೂ ನಕಾರಾತ್ಮಕವಾಗಿಯೇ ಇರುತ್ತಿದ್ದರು. ಅನೇಕ ತಿಂಗಳುಗಳಿಂದ ನಾನು ಅವರಿಗೆ ಬೆಳಕನ್ನು ಕಳುಹಿಸುತ್ತಿದ್ದೆ. ನಂತರ ಅವರು ಧ್ಯಾನದ ತರಗತಿಗೆ ಸೇರಿದರು. ಈಗ ಅವರು ಸಕಾರಾತ್ಮಕರಾಗಿ ಬದಲಾಗಿದ್ದಾರೆ. ನನ್ನ ಜೀವನದಲ್ಲಿ ಶಾಂತಿ ಹಾಗೂ ಸಮಾಧಾನವನ್ನು ತಂದಿರುವ ಸರ್ವಶಕ್ತ ಭಗವಂತ ಮತ್ತು ಬೆಳಕಿಗೆ ನನ್ನ ಅನಂತ ವಂದನೆಗಳು.

– ಒಬ್ಬ ಸಾಧಕರು

ಈಗ ನಾನು ಸಮಾಧಾನಿಯಾಗಿದ್ದೇನೆ, ಒಳ್ಳೆಯ ಆರೋಗ್ಯದಿಂದ ಚೈತನ್ಯಭರಿತನಾಗಿದ್ದೇನೆ. ಎಲ್ಲ ತೊಂದರೆಗಳನ್ನೂ ಶಾಂತವಾಗಿ ಎದುರಿಸಲು ಹಾಗೂ ಅನಿಶ್ಚಿತತೆಗಳನ್ನು ಒಪ್ಪಿಕೊಳ್ಳಲು ಮತ್ತು ಪರಿಸ್ಥಿತಿಗೆ ತಕ್ಕಂತೆ ಹೊಂದಿಕೊಳ್ಳಲು ನನಗೆ ಸಾಧ್ಯವಾಗಿದೆ.

– ಅಶೋಕ್ ಥಾಕೂರ್

ಕೆಲವು ತಿಂಗಳುಗಳಿಂದ ನನಗೆ ಋಷಿಗಳ ಸಹಾಯ ಮತ್ತು ಅನುಗ್ರಹದ ಅನುಭವವಾಗುತ್ತಿದೆ. ನಾನು ಧ್ಯಾನಮಾಡಲು ಹೆಚ್ಚು ಹೆಚ್ಚು ಪ್ರಯತ್ನ ಪಟ್ಟಷ್ಟೂ, ಋಷಿಗಳು ಹೊಸ ಹೊಸ ಚೈತನ್ಯದಿಂದ ನನ್ನನ್ನು ಹರಸುತ್ತಿದ್ದಾರೆ. ಕೆಲವು ವೇಳೆ ಅವರ ಇರುವಿಕೆಯ ಅನುಭವವೂ ಆಗುತ್ತದೆ. ಅಂತರಂಗದ ಶಾಂತಿ ಹೆಚ್ಚಾಗಿ ನನ್ನ ಧ್ಯಾನದ ಗುಣಮಟ್ಟ ಹೆಚ್ಚಿದೆ.

– ಕೆ. ರಮೇಶ್

ಧ್ಯಾನದ ಅವಧಿಯನ್ನು ಹೆಚ್ಚು ಮಾಡಿಕೊಂಡಿರುವುದರಿಂದ ನನ್ನ ಅಂತರಂಗದಲ್ಲಿ ಶಾಂತತೆ ವೃದ್ಧಿಸಿದೆ. ಒತ್ತಡದ ಸಂದರ್ಭಗಳಲ್ಲಿಯೂ ಇನ್ನೊಬ್ಬರಿಗೆ ಸ್ಪಂದಿಸುವ ಮೊದಲು ಸ್ವಲ್ಪ ನಿಧಾನಿಸಲು ನನಗೆ ಸಾಧ್ಯವಾಗಿದೆ. ಕೆಲವೊಮ್ಮೆ ನನಗೆ ಅತೀವ ಸಂತೋಷವಾಗುತ್ತದೆ. ಅದು ನಮಗೆ ತಿಳಿದಿರುವ ಸಾಮಾನ್ಯ ಸಂತೋಷವನ್ನು ಮೀರಿದ ಅನುಭವವಾಗಿದೆ.

– ನಿರ್ಮಲ. ಜೆ

ಡಿಸೆಂಬರ್ ತಿಂಗಳಿನ ಒಂದು ದಿನ ಬೆಳಗಿನ ಜಾವದ ಆಳವಾದ ಧ್ಯಾನದ ನಂತರ, ನನಗೇ ಆಶ್ಚರ್ಯವಾಗುವಂತೆ ನನ್ನ ದೇಹದಿಂದ ಹೊರಬಂದೆ. ಮೊದಲು ನನ್ನ ಮನೆಯ ಮೇಲೆ ತೇಲುತ್ತಿದ್ದೆ, ನಂತರ ತ್ರಯಂಬಕೇಶ್ವರ ಗುಹೆಗೆ ಹೋಗಬೇಕೆಂಬ ನನ್ನ ಬಲವಾದ ಇಚ್ಛೆಯು ಕ್ಷಣಾರ್ಧದಲ್ಲಿ ನನ್ನನ್ನು ಆ ಗುಹೆಗೆ ಕರೆದುಕೊಂಡು ಹೋಯಿತು. ನಂತರ ಕ್ಷಣಾರ್ಧದಲ್ಲಿ ಮುಂಬೈನಲ್ಲಿರುವ ನನ್ನ ಮನೆಯ ಹಾಸಿಗೆಗೆ ಹಿಂದಿರುಗಿದೆ. ಇದು ಆಧ್ಯಾತ್ಮಿಕ ಅನುಭವವಾಗಿದ್ದು, ಇದು ಸಾಧ್ಯವಾಗಿದ್ದು ಮಾಸ್ಟರ್‌ಗಳಿಂದಲೇ. ನನಗೆ ಅತ್ಯಂತ ಪ್ರಶಾಂತತೆಯ ಅನುಭವವಾಗಿ ನನ್ನ ಮನಸ್ಸು ಬಹಳ ಕಾಲ ನೆಮ್ಮದಿಯಿಂದ ಇತ್ತು.

– ರಾಜೇಂದ್ರ ರಂಗ್ನೇಕರ್

ಔಷಧಿಗಳಿಂದ ನನ್ನ ಕಾಯಿಲೆ ಗುಣವಾಗಲಿಲ್ಲವಾಗಿ, ಋಷಿಗಳನ್ನು ಹಾಗೂ ಗುರೂಜಿಯವರನ್ನು ಪ್ರಾರ್ಥಿಸಲು ಪ್ರಾರಂಭಿಸಿದೆ. ಅವರ ದಯೆ ಹಾಗೂ ಆಶೀರ್ವಾದದಿಂದಾಗಿ ನನ್ನ ಆರೋಗ್ಯ ಈಗ ಸುಧಾರಿಸಿದೆ. ಈಗ ನನಗೆ ಪ್ರತಿನಿತ್ಯ ಧ್ಯಾನಮಾಡಲು ಸಾಧ್ಯವಾಗಿದೆ ಮತ್ತು ಹೆಚ್ಚು ಕಾಲ ಬೆಳಕಿನ ಅನುಭವವಾಗುತ್ತದೆ. ನನಗೆ ಸಮಾಧಾನ ಹಾಗೂ ನಿಶ್ಚಲತೆಯ ಅನುಭವವೂ ಆಗುತ್ತಿದೆ. ಈ ಮಾರ್ಗಕ್ಕೆ ಕರೆತಂದುದಕ್ಕಾಗಿ, ದೇವರಿಗೆ, ಋಷಿಗಳಿಗೆ ಹಾಗೂ ಗುರೂಜಿಯವರಿಗೆ ಕೃತಜ್ಞನಾಗಿದ್ದೇನೆ.

– ಸದಾನಂದ. ಪಿ.ವಿ.

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/-
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ - 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ - 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು-560086. ಫೋನ್: 23359992
ಸಂಪಾದಕರು : ಶ್ಯಾಮಲಾ ದೇವಿ